
10



# ಕಕ್ಕಡ ಕವನ

## ಪಲಭಾಷೆರ ಕವನ ಗೂಡ್

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ
ಪಿಂಞ
ಪತ್ರಿಕಾಭವನ ಟ್ರಸ್ಟ್, ಸೋಮವಾರಪೇಟೆ

BVP- 1058- 9/1/17

(5) 1036-72|~~88~~ 87.

# ಕಕ್ಕಡ ಕವನ

(ಪಲಭಾಷೆರ ಕವನ ಗೂಡ್)

ಪ್ರಧಾನ ಸಂಪಾದಕ

ಶ್ರೀಮತಿ ಐಮುಡಿಯಂಡ ರಾಣಿ ಮಾಚಯ್ಯ

ಸಂಪಾದಕ

ಶ್ರೀ ತೇಲಪಂಡ ಕವನ್ ಕಾರ್ಯಪ್ಪ

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಪಿಂಞ

ಪತ್ರಿಕಾಭವನ ಟ್ರಸ್ಟ್, ಸೋಮವಾರಪೇಟೆ

**KAKKADA KAVANA** : A collection of Poems those were recited during the Poets meet held at Somwarpet on 3-8-2010 under the caption "Kakkada Kavigoshti" Published by the Karnataka Kodava Sahithya Academy, Madikeri.

First Edition : 2010

ಆದ್ಯ ಮುದ್ರಣ : 2010

All rights reserved

ಎಲ್ಲಾ ಹಕ್ಕ್‌ನ ಕಾತ್ ಬೆಚ್ಚಿತ್

ಬೊಳಿ ಪಡ್ತ್‌ನವು :

ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಸ್ಕ್ಯಾಟ್ ಭವನ, ಮ್ಯಾನ್ಸ್ ಕಾಂಪೌಂಡ್

ಮಡಿಕೇರಿ - 571 201

(ಫೋನ್ : 08272 229074)

ಅಚ್ಚ್‌ಕಾರ :

ಶ್ರೀಕೃಷ್ಣ ಕಂಪ್ಯೂಟರ್ಸ್ ಅಂಡ್ ಪ್ರಿಂಟರ್ಸ್

ಪೂಜಾ ಆರ್ಕೆಡ್, ಜೂನಿಯರ್ ಕಾಲೇಜ್ ರೋಡ್, ಮಡಿಕೇರಿ

(ಫೋನ್ : 94481 35592)

# ಅಧ್ಯಕ್ಷಂಡ ತಕ್ಕ್

ಕಕ್ಕತ ಎಣ್ಣುವ ಪೆದ ಕೇಪಕಲೇ ಕಣ್ಣ್‌ರ ಮಿಂಞ್ಲಾಲ್ ಕಾಂಬೊ ಅಡ್ಡೀ ಮಳೆ ಬೀರಂಗಾತ್, ಎದೆಗ್‌ಡ್‌ಪನ್ನತ ತೆಡ್‌ರ ಸದ್ದ್, ತಡ್‌ಪಕಯ್ಯತ ಕುಳ್‌ರ್, ಮೋಡ ಕವುಂಜಿತ್ ಇರಟ್ ಆನ ಆಕಾಶ ಇನ್ನತದ್. ಏರ ಮಳೆರ ಕೂಟ್‌ಕ್ ಬೇಲ್ ಪಣಿ, ಕೋಟತ್‌ರ ಗೂಡಾನ ಕಕ್ಕಡ ತಿಂಗಕ್ ತಾಂಡದೇ ಆನ ವಿಶೇಷ ಹಿನ್ನೆಲೆ ಇಪ್ಪಕಾಪಕ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಕಕ್ಕಡತ್‌ರ ಮಾರೀಪತ್ ಚೆರಿಯ ಸಾಹಿತ್ಯ ಜಾಗೃತಿ ಆಡ್‌ಂದ್ ಎಣ್ಣುವ ಉದ್ದೇಶತ್ "ಕಕ್ಕಡ ಕವನ' ಎಣ್ಣುವ ಪುದಿಯ ಪ್ರಯೋಗಕ್ ನಂಗ ಕೈ ಇಟ್ಟಿತ್ ಈ ನಾಡರ ಜನಪದ, ನಮ್ಮ ನಾಳ್‌ಕ್ ವಿಶೇಷ ಆದ್ಯತೆ ಕೊಡ್‌ಪ ಉದ್ದೇಶತ್ ಫಲಭಾಪೆರ ಕವಿಗೋಷ್ಠಿಕ್ ಕೊಡವ, ಕನ್ನಡ, ತುಳು, ಇಂಗ್ಲೀಷ್, ಹಿಂದಿ, ಕುಂಬಾರ, ಅರೆ ಭಾಷೆಲ್ ತರಾವರಿ ಕವನ ಬಂದಿತ್ ಇಲ್ಲಿ ಇದ್‌ನೆಲ್ಲ ಕೂಟಿತ್ ಪುಸ್ತಕ ರೂಪತ್ ಕೊಂಯಿತಿತ್ ಈ ಪುಸ್ತಕತ್‌ಲ್ ಉಳ್ಳದೆಲ್ಲಾ ನಲ್ಲ ಗುಣಮಟ್ಟತ್‌ರ ಕವನ ಎಣ್ಣುವ ಕಾಪುಲೆ. ಅಂದಕಲೂ ಪುರ್‌ಡ್, ಅವಕಾಶ, ಒತ್ತಾಸೆ. ಒತ್ತೋರ್ಮೆ, ಭಾಷೆರ ಮೇಲೆ ಉಳ್ಳ ಅಭಿಮಾನತ್‌ನ ಮನಸ್ಸಲ್ ಬೆಚ್ಚಂಡ್, ಓರ್ ಮಾದರಿರ ಕವನತ್‌ನ ನಂಗ ಇಲ್ಲಿ ಚೆರಿಯ ಪುಸ್ತಕ ರೂಪತ್ ಕೊಂಡ್‌ಬಂದಿತ್.

ಕಕ್ಕಡ ಕವನ 'ಎಣ್ಣ್‌ವ ಚೆರಿಯ ಪುಸ್ತಕಕ್ ಕವನ ಅಯಿಚಿ ತಂದ ಎಲ್ಲಾ ಕವಿಯಕೂ, ಮನಸ್ಸ್‌ರ ಭಾವನೆಕ್ ಎಳ್ತ್ ರೂಪ

ಕೊಡ್‌ತಿತ್ ಕವನ ಎಳ್‌ದ್‌ನ ಕೆಲವು ಕವಿಯಡಲ್ಲಿ ಸಾಹಿತ್ಯ ಮೌಲ್ಯ ತೂಕ, ಅರ್ಥ, ಪ್ರಾಸ, ಹೋಲಿಕೆ ಕಮ್ಮಿ ಇಂಜತೇಂಗಿಯೂ, ಚೆನ್ನಂಗ್ ಮಾರ್ಪಾಡ್ ಮಾಡವಕ್ ಸಹಕಾರ ತಂದ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿರ ಸದಸ್ಯಂಗಳಾನ ಬಾಚರಣಿಯಂಡ ರಾಣು ಅಪ್ಪಣ್ಣ, ತೇಲಪಂಡ ಕವನ್ ಕಾರ್ಯಪ್ಪ ಪಿಂಞ ವಿಜಯ ಕರ್ನಾಟಕ ಪತ್ರಿಕೆರ ಜಿಲ್ಲಾ ವರದಿಗಾರ ಸದೇಶ್ ಕಾರ್ಮಾಡ್ ಅಯಿಂಗಕೂ ಫಲಭಾಷೆರ ಕಕ್ಕಡ ಕವಿಗೋಷ್ಠಿ ನಡ್‌ತ್‌ವಕ್ ಅವಕಾಶ ಮಾಡಿತಂದ ಸೋಮವಾರಪೇಟೆ ಪತ್ರಿಕಾಭವನ ಟ್ರಸ್ಟ್, ಸೋಮವಾರಪೇಟೆ ತಾಲೂಕು ಪಿಂಞ ನಗರ ಪತ್ರಕರ್ತಂಗಡ ಸಂಘಕೂ ನಂಗಡ ಆತ್ಮೀಯ ವಂದನೆ ಪಿಂಞ ಶುಭಾಶಯ.

ಶ್ರೀಮತಿ ಐಮುಡಿಯಂಡ ರಾಣಿ ಮಾಚಯ್ಯ
ಅಧ್ಯಕ್ಷಂಗ,
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ.
ಮಡಿಕೇರಿ.

# ನಿಮ್ಮೊಂದಿಗೆ...

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಸೋಮವಾರಪೇಟೆ ಪತ್ರಿಕಾಭವನ ಟ್ರಸ್ಟ್ ಮತ್ತು ಪತ್ರಕರ್ತರ ಸಂಘವು ಕವಿಗೋಷ್ಠಿ ನಡೆಸುತ್ತಿರುವುದು ಶ್ಲಾಘನೀಯ. ಜಿಲ್ಲೆಯಲ್ಲಿರುವ ಉದಯೋನ್ಮುಖ ಕವಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸಾಕಷ್ಟು ಕವಿಗಳು ಬೆಳಕಿಗೆ ಬಂದರೆ ಸಾಹಿತ್ಯದ ಬೆಳವಣಿಗೆ ಸಾಧ್ಯ.

ಕವಿಯು ತನ್ನ ಮನದಲ್ಲಿ ಮೂಡುವ ಭಾವನೆಗಳಿಗೆ ತನ್ನದೇ ಆದ ರೀತಿಯಲ್ಲಿ ಅರ್ಥಪೂರ್ಣವಾದ ಮಹತ್ವ ನೀಡುತ್ತಾನೆ. ಕವಿಗಳು ಬೆಳೆದರೆ ಸಾಹಿತ್ಯವು ಬೆಳೆದಂತೆ. ಈ ನಿಟ್ಟಿನಲ್ಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಿಂದ ಇನ್ನಷ್ಟು ಉತ್ತಮ ಕಾರ್ಯಕ್ರಮಗಳು ಮೂಡಿ ಬರಲಿ.

ಅಕಾಡೆಮಿಯ ಕಾರ್ಯಕ್ರಮಗಳಿಗೆ ಸೋಮವಾರಪೇಟೆ ಪತ್ರಿಕಾಭವನ ಟ್ರಸ್ಟ್‌ನ ಸಹಕಾರ ಎಂದಿಗೂ ಇರುತ್ತದೆ. ಸಾಹಿತ್ಯದ ಜಾಗೃತಿಯೂ ಎಲ್ಲಾ ಸಮಯದಲ್ಲೂ ನಿರಂತರವಾಗಿ ನಡೆಯಲಿ ಎಂದು ಹಾರೈಸುತ್ತೇನೆ.

ಸಿ.ಎನ್. ಸುನಿಲ್ ಕುಮಾರ್
ಅಧ್ಯಕ್ಷರು
ಪತ್ರಿಕಾಭವನ ಟ್ರಸ್ಟ್
ಸೋಮವಾರಪೇಟೆ.

# ಈ ಕುಂದ್ ಲಂದ್

ದೇವಳೆ ನಲಿಯುವ ಸ್ವರ್ಗವೊಂದುಂಡ್ಂದ್
ಪರಿಯುವ ತಕ್ಕದ್ ನೇರಾ?
ದೇವಳೆ ಕಾಣತ ಸ್ವರ್ಗ ಸಿರಿನೆಲೆ
ಕುಂದಿದ್ ನೋಟ್ ನೀ ಬಾರಾ
ಬೀಜುವ ಕಾತ್‌ಕ್ ಒತ್ತಸ್ವರ ಕೂಟಿ
ಗಿಡಮರ ಪಾಡುವದಾ
ಪಲ ತರ ಗಿಡ ಮರ ಕೈಯ್‌ನ ಬೀಜಿತ್
ಇಲ್ಲಿಕ್ ಕಾಕುವದಾ
ನೂರ್ ತರತ್‌ರ ಪಣ್ಣ್‌ಪಲ ಜೂಂಗಿ
ಸುತ್ತೊಡ್ ಕಾಂಬ ಅದಾ
ತರತರ ರಂಗ್‌ರ ಪೂವ್‌ರ ಗಮನ
ಕಾತ್‌ಲ್ ಮೇಂಗಿ ತದಾ
ಕೊಡಗ್‌ರ ವೀರಂಗ ಓಡಿಕಳ್ ಚೋರ್
ಮೊಟ್ಟ್‌ನ ಕಂಡ ಇಲ್ಲಿ
ಪೂಂದೆಳಿ ಲೆಲಂಗ್‌ನ ಗಪ್ಪುನ ಅಂದ್
ಕಂಡದೆ ನಾನಿಲ್ಲಿ

"ಕೊಡಿ ಬುಟ್ಟ ಬಳ್ಳಿಕ್ ಚಳೆ ನಾನಾಪಿಂದ್"
ಪರಂದತ್ ಅಂವನಂದ್
ಆನೆರ ಪೋಲತ ಆ ಕರಿಂಗಲ್ಲ್
ಸಾಕ್ಷಿಯು ಆಪೀಂದ್
ಬೀಜುವ ಕಾತ್ ಶ್ರುತಿ ತಾನಾಚಿಲ

ನಾಡೋರ್ ಪಾಟ್‌ಕಂದ್
ಬೊಳ್ಳಾಂದಿ ಮರವೊಂದ್ ಪರಂದತ್ ಕೇಳ್
ಬೋಜ ಕಾರನೆ ನಾನ್‌ಂದ್
ಈಚಿರ ಚೀಪೆ ಬೀಸಣಿಗೇಂದ್
ಒತ್ತ್ಂಡ್ ತೆಳಚತ್
ಪಚ್ಚೆ ಕಂಡೆ ಪಿಲ್ಲ್ ತಂದೋರ್ ಭಾಷೆ
ಪಚ್ಚಡ ಬಿರಿ ಪೀಂದ್
ಬಾಣತ್ ಮೋಡ ಒತ್ತಿತ್ ಪರಂದತ್
ಮೇಕಟ್ ಆಪೀಂದ್
ಕಬ್ಬ ವರತ್‌ರ ಸೀತೆ ಪೂಜೊಪ್ಪೆ
ಮಾಲೆ ನಾನಾ ಪೀಂದ್
ಮೂರ್ತಕ್ ಚಪ್ಪರ ನಾನಾಯಿತಿಪ್ಪೀಂದ್
ಪಚ್ಚ್‌ಚಿ ಆಲ್ ಮರ
ಅಂಗನು ಅರುವನು ನಂಗಳೆ ಆಪಾಂದ್
ಪರಂದವು ಕಾಡ್‌ಮರ
ಮನತ್‌ರ ಒಳ್‌ಲೇ ಮಂಗಲ ಕಯಿಚಂಡ
ಗಪ್ಪುನ ಆ ನೇರ.

ಬಾಚರಣಿಯಂಡ ಅಪ್ಪಣ್ಣ, ಕುಶಾಲನಗರ

# ಅಪ್ಪ ಚಾಕ್‌ನ ನಾಯಿರ ಕುಟ್ಟಿ - ತೆಳಿ ನೀನ್!

ಅಪ್ಪ ಮನೆಲ್ ಚಾಕ್‌ನ ನಾಯಿರನ್ನನೆ ಪ್ರೀತಿ
ಇಪ್ಪದಿಲ್ಲೆ ಆಂಡ ಕುಟ್ಟಿಕು ಬೀದಿ ನಾಯಿಕು|
ಅದ್ ನೂರ್ ಮನೆ, ಕನ್‌ಚ ಒಟ್ಟಿ ಚೂರ್ ತಿಂದಿತಿಪ್ಪಲಾ?
ನೀಡ ಸ್ವಂತ ನಾಯಿಕ್ ನಿನ್ನ ಕಂಡ್‌ಲೆಂಗ್ಯೂ ಪ್ರೀತಿ ಇಪ್ಪ -ತೆಳಿನೀನ್|

ನಿನ್ನ ಕಂಡಂಡ್ ಪೊಗಳ್ಯಂಡುಳ್ಳ ಕೂಟ್‌ಕಾರಿ ಪೂಂಞ.
ನಿನ್ನ ಬುಟ್ಟಿತ್ ಎಲಿ ತೇಡಿ ಪೋಪ!
ಅನ್ನನೆ ಚೆರ್‌ಪತ್‌ಂಜೇ ನೀಡ ಸಿರಿಜೀವನ ನೋಟ್‌ನಪೂಂಞ|
ಇಕ್ಕಲೂ ನಾಟಕ ಮಾಡ್ವ ಮಿಯಾಂ, ಮಿಯಾಂ, ಮಿಯಾಂ, ತೆಳಿನೀನ್|

ನೀ ಪೋನಲೆಲ್ಲಾ ಅದ್‌ಂಡ ಮನ ಓಡ್ವ
ಸಮಯ ಕ್‌ಟ್ಟಿಕ ಕೆಟ್ಟಿಕ್ ನೋಟ್ವ|
ನೀ ತಪ್ಪ್‌ಚಿಟ್ಟ್ ದೂರ ಬೆಚ್ಚಕೊ ಪಕ್ಕ - ಪಕ್ಕೀ ಬಪ್ಪ|
ಅದ್‌ಂಗ್ ಅರ್ಥಾನಕೋ ಅರ್ಥಾಕ ತೆನ್ನನೆ ಇಪ್ಪ.
ತೆಳಿನೀನ್ |

ಅದೆಲ್ಲಾ ಆಕಣೆ ನೀ ಭಾರೀ ಕೊಡಿಲ್ ಅಳ್‌ತಿತಿಪ್ಪ|
ಇದೆಲ್ಲಾ ಕಂಡಿತೂಕೇಟಿತೂ ಗೊತ್ತಿಲ್ಲ ತನ್ನಕೆ ನಾಟಕ|
ಎಲ್ಲಾ ಬಲ್ಯಯಿಂಡ ಪೆದೇ ಬಾಯಿಲ್|
ಅವನ ಗೊತ್ತಾ? ಇವನ ಗೊತ್ತಾ? ಥೂ! ಥೂ!!
ತೆಳಿನೀನ್|

ಇದೆಲ್ಲ ಅರ್‌ಂಜ ನೀನ್ ಗೊತ್ತಿಲ್ಲೆ - ಇಲ್ಲೆ- ಇಲ್ಲೆ- ಇಲ್ಲೇ....
ಈ ಇಲ್ಲೆ ಪಾಟ್ ಆ ಪೂಂಞ್‌ಕ್ ಅರ್ಥಾಪ?
ಅದ್‌ಂಗ್ ನೀಡ ಪಲಾವು ಕಾಂಬಕ, ಕೇಡ್‌ಲ್ ತಿಂಗತೆ,
ಅದ್‌ಪೋಪ ಎಲಿಪುಡಿಪಕ್? ತೆಳಿದುಂಬ ತೆಳಿ ನೀನ್|

ಈ ಗುಟ್ಟರ್‌ಂಜ ನೀನ್ ಎಳ್‌ದ್ಯಂಡೇ ಬದ್‌ಕ್‌ನ|
ನೀ ಪರೆವ ಅಕ್ಷರ ಸಮ್ಮೇಳನ, ಕಷ್ಟ, ಸುಖ, ಮಾನವೀಯತೆ?
ಅದ್ ಪರೆವೊ ನಿನ್ನಾಂದ್ ಕಂಡ ದದ್ದ್ ಕಾರ್,
ಕಾರ್, ಕಾರ್ ಮೇಳ?
ಅಸಮ್ಮಂದ ವಿಷಯ ಕೇಪಕ ನೀ ಕಾರಿ, ಕಾರಿ, ಕಾರಿ, ತುಪ್ಪ್‌ನಕೋ
ಅದ್ ಅರ್ಥಾಚೋ ಪಾಪ ಪಾಪ ! ಈ ಬಯತ್‌ಲ್ ?
ತೆಳಿ-ತೆಳೀ

ಮಂಡೀರ ಜಯಾ ಅಪ್ಪಣ್ಣ,
ಬೆಂಗಳೂರು.

# ಕವಿ ಕಂಡ "ಮೈಥಿಲಿ"

1. ಕವನವಿದು ನಿಮಗಾಗಿ| ಕಥೆಯಲ್ಲ ಕೃತಿಯಲ್ಲ |
ಅವನ ಮನದಾ ದ್ವಂದ್ವ | ರಸ ವಿಮರ್ಶೆಯೂ ಅಲ್ಲ |
ಕವಿದ ಕತ್ತಲು ಮನದಿ | ಕರಗಲೇ ಬೇಕಲ್ಲ ?
ರವಿ ಕಾಣದ ಅರ್ಥ | ಕವಿಕಂಡ ರಸಗುಲ್ಲ!
ಸವಿಯಲು ಜಾಣ್ಮೆ | ಇರಬೇಕು ನಿಮಗೆಲ್ಲ ||

2. ಪ್ರೀತಿಯಿಂ ಆಲಿಸಿದ | ರಾಮಾಯಣ ಮುಗ್ಧ ಬಾಲ್ಯದೊಳು|
ಮಾತೆ ಪೇಳಲು ಕಥೆಯ | ಮಂಥನವು ಮನದೊಳು|
ರೀತಿ ನೀತಿಯ ಕೋಶ | ಸೀತೆಯಾ ಆ ಬಾಳು
ಪ್ರೀತಿ ಇಲ್ಲದ ರಾಜ | ನೀತಿಯ ಕಟ್ಟಳೆ |
ಮೈಥಿಲಿಯ ಕಂಡ ಕವಿಗೆ | ಸೀತೆ ಕುಂಚವೇ ಆದಳು||

3. ತ್ರೇತಾಯುಗದಾ ಹೆಣ್ಣು | ಸರಸರನೆ ಬಂದಳು |
ಶ್ವೇತಾಂಬರಿಯಾಗಿ | ವಾಲ್ಮೀಕಿ ಆಶ್ರಮದೊಳು |
ಮಾತಾ ಪಿತರಾರೆಂದು | ತಾನರಿಯೆನೆಂದಳು |
ಮಿಥಿಲೇಶ್ವರನ ರಾಜಕುವರಿ | ತಾನೆಂದಳು |
ಅತಿವಿನಯದಿ ಕವಿಗೆ | ಸತ್ಯಕಥೆ ಉಲಿದಳು ||

4. ಕವಿ ಬ್ರಹ್ಮಧತ್ತ | ನೆಪಮಾತ್ರ ಮರೆಯಲಿ |
ಕವಿ ಪುರುಷನ | ಎದೆಕೊರೆದ ಮೈಥಿಲಿ |
ಭುವಿಯಾಳಾಡಳಿತ | ವೈಧಿಕರ ಕೈಯಲಿ |
ಶಿವ ಭಕ್ತಿ ! ದ್ರಾವಿಡ ರಾಜ | ರಾವಣನ ಮನದಲಿ |
ಶಿವಧನಸ್ಸು ಹಳತೆಂದು | ನಕ್ಕಳಾ ಮೈಥಿಲಿ ||

5. ರಾಮನೆದೆಗೇರುವ | ಮೊದಲೇ ಅದು ಮುರಿಯಿತು |
ವಾಮ ದೇವನ ಮನ | ಉದರವೂ ಉರಿಯಿತು |
ಕಾಮದೇವನ ಬಾಣ | ಮೈಥಿಲಿಯಮನ ನಾಟಿತು |
ಕಾಮ ಕಸ್ತೂರಿ ದಂಡೆ | ಘಮ ಘಮಿಸಿತು |
ಹೂಮಾಲೆ ರಾಮನ | ಕೊರಳಲಂಕರಿಸಿತು ||

6. ಅಯೋಧ್ಯರಮನೆಲಿ | ಅರಸೊತ್ತಿಗೆ ನಾಟಕ |
ತಾಯಾದರೆಲ್ಲತ್ತೆರು | ಯಜ್ಞಪುರುಷಾಟಕೆ |
ಮಾಯಾಂಗನೆಯಲ್ಲ | ಮಂಥರೆ ಪಾಪ ಇತಿಹಾಸಕೆ |
ದಯಾಮಯಿ ಭರತಂಗೆ | ಪಟ್ಟದಾ ಪಾದುಕೆ |
ಮಾಯಾಜಾಲವದು | ಅತ್ತೆಯರ ಕಿಚ್ಚಿನ ಕಾಣಿಕೆ ?

7. ಕಿರಿಯತ್ತೆ ಕೈಕೆಗೆ | ಪಟ್ಟದಾಸೆ ಇತ್ತು |
ಕಿರು ಬೆರಳ ಕಟ್ಟುಕಥೆ ಮೈಥಿಲಿಗೆ ಗೊತ್ತಿತ್ತು |
ಅರಿತು ಪತಿಯೊಡನೆ | ವನಕೆ ಹೊರಟಾ ಹೊತ್ತು |
ಪರಿಚಾರಿಕೆಯರ ಅಳುವೆಲ್ಲ | ನಟನೆಯಾಗಿತ್ತು |
ಪುರಾಣದ ಬೇರನ್ನೇ | ಕಥೆ ಅಲುಗಿಸಿತ್ತು |

8. ನವ ವಿವಾಹಿತರ ಕೂಡ | ಲಕ್ಷಣ ತೊಡಕಾಗಲಿಲ್ಲ |
ಯುವರಾಣಿ ಸೀತೆಗೆ |ಹಸಿವು ಅರಿತಿರಲಿಲ್ಲ !
ಸವಿಯಲಾಮ್ಲಕ ಹಣ್ಣು | ಸೊರಸೊರನೆ ರಸ ಜೊಲ್ಲು |
ಅವಳು ವನದಿ ಭಕ್ಷಿಸದ | ಹಣ್ಣುಗಳೇ ಇರಲಿಲ್ಲ |
ಸವಿದೆನೆಂದಳು ಸೀತೆ | ವಿಧವಿಧದ ಜೇನೆಲ್ಲ |

9. ಕಾಮ ಪ್ರೇಮವರಿತಳು | ಅತ್ರಿ ಅನಸೂಯರ |
ರಾಮನಿಗೆ ಬೇಕಿತ್ತಾ ? ಈ ದಾಂಪತ್ಯ ಸಂಸಾರ ?
ರಾಮ ನಾಮವೆ | ಪ್ರಜೆಗಳಿಗಂದು ಮಂತ್ರ ?
ಸಾಮಾನ್ಯ ಜನಕೆ | ರಾಜರೇ ದೇವರಾ ?
ಹೋಮಾಗ್ನಿ ಕೊನೆಗೆ | ತನ್ನ ಸತ್ವಪರೀಕ್ಷೆ ತಂತ್ರ ?

10. ಅಯೋನಿಜರೆಲ್ಲಾ | ಮಹಿಮಾ ಪುರುಷರೇ ?
ಅಯೋಧ್ಯ ರಾಜರಾಣಿಯರೆಲ್ಲ | ಕ್ಷಾತ್ರ ಕುಲದವರೆ ?
ತಾಯಂದಿರ ಗೌರವಿಸಿ | ಕವಿಗಳು ಬರೆದರೆ ?
ಮಾಯ್ಯಾ ಮೃಗವಹಿಡಿಯೆ | ಸೋದರರು ಹೋದರೆ ?
ಪ್ರಾಯದ ಶೂರ್ಪನಖಿಯ | ಕಾಮವನು ಒದ್ದರೆ ?

11. ತಾಟಕಿಯ ಹೆಂಗೊಲೆ | ನ್ಯಾಯವೇ ರಾಮನಿಗೆ ?
ಆಟವಾಯಿತೇ ?| ರಾವಣ ಸೋದರಿಯಸ್ತನ ಮೂಗು?
ಬೇಟೆ ತಾನಾದಳಾ...| ದ್ವೇಷದ ರಾವಣಗೆ?
ಕಾಟಾಚಾರವೆಂದಳು | ಆ ಲಕ್ಷ್ಮಣ ರೇಖೆಗೆ !
ನೋಟ ಬೆಚ್ಚಿರಾವಣನ | ತಾನೇ ಹಿಂಬಾಲಿಸಿದಳು ಲಂಕೆಗೆ |

12. ವನವದು ಮಂಡೋದರಿಯ | ಪ್ರೇಮಕ್ಕೆ ಕಟ್ಟಿಟ್ಟ |
ಘನತೆಯಲಿ ರಾವಣ | ಅಶೋಕವನ ಗೃಹದಿ ನನ್ನಿಟ್ಟು |
ಅನುದಿನವು ಸುಮ್ಮನೆ | ನನ್ನ ಶೀಲವ ಒರೆಗೆ ಹಚ್ಚಿಟ್ಟ |
ತನ್ನ ಮುಟ್ಟದೆ ಘನ ಮರ್ಯಾದೆ | ಲಂಕೇಶ್ವರನೇ ಕೊಟ್ಟ |
ಮನದಿ ಮುಂಬರುವ ದುಷ್ಕೀರ್ತಿ ನೆನೆದು | ರಾಮನಿಗೆ ಸೋತುಬಿಟ್ಟ |

13. ಪಟ್ಟಾಭಿಷೇಕ ದಿನ | ಕಿಚ್ಚು ಮೊಗದತ್ತೆಯರು |
ನೆಟ್ಟಗೆಮ್ಮನು ಹರಸಲು | ಅಂಜಿದರು !
ಕಟ್ಟೆಟ್ಟ ಬುತ್ತಿಯಲಿ | ವಿಷದ ಮೊಸರು ?
ಗಟ್ಟಿ ಮನ ಇರಲೆಂದು | ಸಖಿಯರು ನಕ್ಕರು.
ಮುಟ್ಟಲೆಂದೇ ರಾಮ | ಎನ್ನ ಶಯನಗೃಹಕಾಗಮಿಸಿದರು.

14. ಬಿಡದೆ ಕವಿ ಕಲ್ಪನೆಗೆ | ಸುರತ ವಿವರಿಸಿದಳಾಕೆ |
ನಡೆದನಂತೆ ರಾಮ | ಅವಸರದಿ ಶಯ್ಯಾಗ್ರುಹಕೆ !
ಚಡಪಡಿಸುತ | ಕಾಮತೃಷೆ ಶಮನಕೆ !
ತಡೆದು ಅನುಭವದ ನೋವ | ಸಂಭೋಗ ಉದರಕೆ.
ತಡೆದಿಟ್ಟ ಬ್ರಹ್ಮಚರ್ಯ | ವೈಭವದ ಕುಡಿಯಾಯ್ತು ವಂಶಕೆ.

15. ಮಂಕು ದೀಪದಿ ರಾಮ | ರತಿಗೆಳೆಯುತ್ತಿರಲು |
ಬಿಂಕದಿ ಪುರುಷ ಸಿಂಹ | ಮೈ ಮುರಿದು ಕ್ರೀಡಿಸುತ್ತಿರಲು |
ಮಂಕಾಗಿ ಮೈಥಿಲಿ ಜಿಂಕೆ | ಮೈನೊಂದು ಸೇವಿಸುತಿರಲು |
ಲಂಕೇಶ್ವರನ ಚಿತ್ತಾರ ಹಚ್ಚೆ | ಅಯ್ಯೋ ಸ್ತನವನಾ ಮುಚ್ಚುತ್ತಿರಲು ?
ಶಂಕಿಸುತ ಮರುದಿನ | ದರ್ಪಣದಿ ನೋಡಿನಾ - ಕುಚಸವರುತಿರಲೂ ....||

16. ಎಲಾ... ಎಲಾ... ಮುಗ್ಧ | "ಕಕುವ" ಇದಕಂಡಳೆಂದರು ?
ಹಲವಾರು ಕವಿಗಳು | ಕಲ್ಪಿಸಿ ಕ್ರೀಡಿಸಿದರು !
ಮೊಲೆ ಮೇಲೆ ಹಚ್ಚೆಯ | ಕವಿಗಳೆಲ್ಲಾ ಕಂಡರು ?
ಕೆಲವು ಕವಿಗಳು | ತಾವೇ ಹಚ್ಚೆ ಚುಚ್ಚಿದರು |
ಫಲಿಸಿತು ಮೈಥಿಲಿಗೆ | ರಾಮ ಸಂಗಮದಿ ಬಸಿರು ||

17. ವನದಿ ಬ್ರಹ್ಮಚರ್ಯೆ | ಸತಿಪತಿಗೂ ಗೊತ್ತು |
ಮನ ಉರಿದು ಕೇಳಿದ | ಮಾತೆಯರ ಮಾತು !
ವನದಲಾಗದ ಬಸಿರು | ಲಂಕೆಯಲಾಯಿತಾ ? !
ಘನಪುರುಷ ಸಿಂಹನ | ಸಂಶಯವೆ ಕೆರಳಿತು |
ವನಿತೆ ಪತಿವ್ರತೆಗಿದು | ತಡೆಯಲಾಗದ ಕುತ್ತು |

18. ಚಾಡಿ ಮೂರತ್ತೆಯರು | ಕಿವಿತುಂಬಿರಾಮನಿಗೆ ?
ಚಾಡಿ ರಾಮನ ಮನ | ಸಂಶಯ ಪಿಶಾಚಿಯಾಗೆ |
ಬೇಡಿದಳೂ ಮೈಥಿಲಿ | ಶ್ರೀರಾಮ ಮುಟ್ಟಿದನೇ ತಿರುಗಿ ?
ಕಾಡಿತಯ್ಯೋ "ಮಾಯೆ" | ಹೆಂಗಳೆಯರಾಗಿ ಮೈಥಿಲಿಗೆ !
ಕಾಡಿಗೆ ಮರಳಿ ತೆರಳಿದ | ಆ...ಕರಾಳ ನಿಶೆಯೇ ... ಸೀ... ತಾ... ಪರಿತ್ಯಾ...ಗ ||
ಸೀ... ತಾ... ಪರಿ...ತ್ಯಾ...ಗಾ...?

ಮಂಡೀರ ಜಯಾ ಅಪ್ಪಣ್ಣ,
ಬೆಂಗಳೂರು

# ಪ್ರಕೃತಿ ಬರೆಯಿನ ಕಬಿತೆ (ತುಳು ಕಬಿತೆ)

ಜತ್ತ್ ಬಡ್‌ತ್‌ದ್ ಕಂಡೊ ಗುಡ್ಡೆನ್
ಬತ್ತ್ ತೊಲೆಗೆ ಕೊಡಗ್ ಈರೊರೊ
ದತ್ತ್ ಬಲತ್‌ಗ್ ಓಲು ತೊಂಡಲ
ಪಚ್ಚೆ ಪದ್ದೆಮಿಗೆ

ಮಿತ್ತ್ ಬಾನೊತ ಮುಗಲ್ ಮಲ್ಲಿಗೆ
ಸುತ್ತು ಕಟ್ಟುನಿ ಮಂಜಿ ಪರದೆಗೆ
ಮುತ್ತು ಸುರಿಪುನಿ ಪ್ರಕೃತಿ ಅಪ್ಪೆನ
ಗುಂಡೊ ಉಂದು ತೂಲೆ.

ಬಾಳೆ ಕಾಪಿಗೆ ಮುಂಚಿ ಬೂರ್‌ಗೆ
ಓಲು ತೂಂಡಲ ಬುಳೆತ ಸೋಕುಗೆ
ತಾಳೆ ಕಂಗ್‌ಗೆ ಬಾರ್ ಶುಂಠಿಗೆ
ಕೊಡಗ್ ಮಣ್ಣ್‌ಡ್‌ಗೆ.
ಏಳ್ ಕಡಲ್‌ನ್ ದಾಟ್ ಪೋವಡೆ
ಮೂಲ್ ತೂಲೆಗೆ ಸ್ವರ್ಗೊ ಪೊರ್ಲುನು
ಗಾಳಿದೊಯಿಲ್‌ಗ್ ಸಾಲ್ ಮರ ಮರ
ಛತ್ರೊ ಚಾಮರೊನೆ.

ಅಂಚಿ ತೂಲೆಗೆ ಕಾಡ್ ಮರಟೊರೊ
ಎಂಚ ನೇಲುಂಡು ಪೆರಿಯ ಚೀಯನೆ
ಅಂಚ ಈ ಬನೊ ಕಾಡ್ ಮುರ್‌ಗೊಲೆ
ಗೂಡ್ ತೂಲೆಗೆಯೆ.
ಗೊಂಚಿಲುಂಡುಯೆ ಸಾರ ಪರ್‌ಂದ್‌ತ

ಇಂಚಿ ಈ ಮರ ಮರತ ಗೆಲ್ಲ್‌ಡ್
ಪಂಚ ಪಾಂಡವೆರಿಂಚಿ ಬತ್ತ್‌ದ್
ಅಜ್ಞಾತ ಕಳೆಯೆರ್‌ಗೆ.

ಗಿರಿತ ಮಿತ್ತ್‌ದ ನಿಲೆಟ್ ಉಂತುದು
ಜರಿತ ರಭಸೊಟು ಪರಿತ್ ಪರಿತ್‌ದ್
ಗುರಿನ್ ಸೇರುನಿ ಪೊರ್ಲು ತೂಯರೆ
ಕಣ್ಣ್ ಯಾವಂದ್‌ಮೆ.
ದೊರಿತ್ ದೊರಿತ್‌ದ್ ಬರ್‌ಸೊನೀಡೆಗ್
ದುರಿತ ದುಃಖೊನು ದಾಂತೆ ಮಲ್ತ್‌ದ್
ಬರೊತ ನಿರೆಲ್‌ನ್ ಕಳೆತ್ ಬುಡುಪಳ್
ಅಪ್ಪೆ ಕಾವೇರಿ...

ತೆರಿದ್ ತೆರಿಯಂದೆ ಬರೆಯೆತೂಲೆಗೆ
ಅರಲಿ ಲೆಕ್ಕೊನೆ ಕಾಡ್ ಮಲ್ಲಿಗೆ
ಪೊರ್ಲು ಘಮಘಮ ಗಂಧ ಪರಿಮಳೊ
ದೊರಿಪಡೊರೆ ಕಬಿತೆ
ಬರೆನ ಶಬ್ದೊತ ಒಪ್ಪು ತಪ್ಪುನೆ
ಸರಿಟ್ ತೆರಿದೊಗೊ ಓದುತೂಲೆಗೆ
ಕೊರ್‌ದ್ ಇಪಮೊನ್ ಬರವು ಬರೆಯರೆ
ಯಾನ್ ಕವಿಯತ್ತ್‌ಯೆ

ನಾಗೇಶ್ ಕಾಲೂರು

# ಆಸೆ ಜಾಸ್ತಿ - ಭಾಷೆ ಇಲ್ಲೆ (ಅರೆಭಾಷೆ ಕವನ)

ಇಲ್ಲಿ ಆವಿ ಮೋಡ ಮತ್ತೆವ್ವೋ ಮಳೆದ್ ಅಬ್ಬರ

ಇಲ್ಲಿ ಹೂವು, ಅಲ್ಲಿ ದುಂಬಿ ಮತ್ತೆಲ್ಲೋ ಜೇನ್‌ರ್ ಝೇಂಕಾರ

ಹಗ್ಲ್‌ಬೇಕ್ ಇರ್ಲ್ ಬೇಕ್ ಜೀವ ಜಾಲದ ಬದ್ಕಿಗೆ

ಬೇವು ಬೇಕ್ ಬೆಲ್ಲ ಬೇಕ್ ಬದ್ಕ್‌ನ ರಸಕವಳಕೆ

ನಿಂಗೆ ನಾನ್ ನಂಗೆ ನೀನ್ - ತತ್ವ ಮರ್ತೇ ಹೋಗುಟು

ನಾವ್ ತಿಂಬ ಉಪ್ಪು - ಅನ್ನ ಒಬ್ಬ ಮಾಡ್ದ್ ಎಲ್ಲ

ಬೀಸಿ ಬರ್ವ ಗಾಳಿಗಿಲ್ಲೆ ಮಡಿ ಮೈಲಿಗೆ ಸೋಂಕು

ಸೂರ್ಯಗಿಲ್ಲೆ ಚಂದ್ರಂಗಿಲ್ಲೆ ನಮ್ಮಲ್ಲರ್ವ ಸೊಕ್ಕು

ಪೆದ್ದು ಜನರ ಗುದ್ದಾಟ ನಿನ್ನೆ ಮೊನ್ನೆಂದಲ್ಲ

ಗೋರಿ ಗೋರಿ ಗುಡ್ಡೆ ಹಾಕಿ ಗುಡ್ಡೆ ಮೇಲೆ ನಿತ್ತವೆ

ಆಸೆ ಜಾಸ್ತಿ - ಭಾಷೆ ಇಲ್ಲೆ ಎಲ್ಲಾ ನಂದೇಂತೇಳಿವೆ

ಇಲ್ಲಿ ಹುಟ್ಟಿ ಅಲ್ಲಿ ಬೆಳ್ದ್ ಎಲ್ಲೋ ಸತ್ತ್ ಹೋದವೆ

ನಂಗೂ ಇಲ್ಲೆ ನಿಂಗೂ ಇಲ್ಲೆ ಉಸ್ರು ನಿತ್ತ ಮೇಲೆ

ಬಿ.ಆರ್ ಜೋಯಪ್ಪ, ಮದೆ.

# ಬೇಕಾಗಿದೆ ನೆರಳು ಕೊಡುವ ಮರ

ಉರಿವ ಸೂರ್ಯ
ಸುಡುವ ನೆಲ
ತಾಳಲಾರೆ ಬಿಸಿಲ ಝಳ
ಬೇಕಾಗಿದೆ ನೆರಳು
ಕೊಡುವ ಮರ
ಎಲ್ಲಿ ಹುಡುಕಲಿ ?
ಈ ಮರಕ್ಕೆ ರೆಂಬೆಯೇ ಇಲ್ಲ
ಆ ಮರಕ್ಕೆ ರೆಂಬೆಯಿದ್ದರೂ
ಎಲೆಗಳಿಲ್ಲ
ಎಲ್ಲವೂ ಬೋಳುಮರ
ನನಗೆ ಮರದ
ಹೂ ಬೇಡ
ಹಣ್ಣು ಬೇಡ
ತಣ್ಣನೆಯ ನೆರಳು ಬೇಕು
ಮರದ ತಂಪಾದ
ನೆರಳಲ್ಲಿ ಕೂತು ದಣಿವು ಪರಿಹರಿಸಬೇಕು
ನನ್ನೆದೆಯ ದುಗುಡವನ್ನೆಲ್ಲ
ಮರೆಯಬೇಕು
ಹೇಳಿ ಎಲ್ಲಿದೆ?
ಎಲ್ಲಿದೆ ನೆರಳು
ಕೊಡುವ ಮರ ?

ಸಹನಾ ಕಾಂತಬೈಲು, ಬಾಲಂಬಿ

# ಅಮ್ಮ (ಕುಂಬಾರ ಭಾಷೆ)

ಬೆಳಗಾತಿ ಎದ್ದ್
ರಂಗೋಲಿ ಬಟ್ಟಿದ್
ಅಣ್‌ತಿಗೆ ಬೆಳ್‌ಗಿ
ಕಾಯುತ್ತ್ರೋಳ್ ನಮ್ಮ
        ಪ್ರೀತಿಯ ಮಾತಾಡಿದ್
        ಬೇನೆಯ ನುಂಗೂಂಡ್
        ಎಲ್ಲರೊಟ್ಟಿಲ್ಲಾ ಎಗೊಲೂ
        ಮಮತೆಯ ತೋರುತ್ತ್ರೋಳ್
ಬಿಸಿಲ್‌ಲಿ ದಣಿದುದ್
ಏರೆಹೊಟ್ಟೆ ತುಂಬುದಡೆನೂ ಕಣ್ಣೀರ ತರದೆ
ಕುಷಿಯಿಂದ ನಗ್‌ಸ್‌ತ್ತ್ರೋಳ್
        ಮಳೆಯೇ ಬರೇಲಿ ಬಿಸಿಲೇ ಇರೇಲಿ
        ಈ ಜೀವ ಎಂದೆಂದಿಗೂ
        ಪ್ರೀತಿಯ ಅಮ್ಮನ ನೆನಪಾಗೆಲಿ
ಮಾತ್ ಮಾತಿಲಾ ಬಂದ್‌ಂಡ್
ಓಟ್ಟಿ ಓಟ್ಟಿಲಾ ಇದ್ದಾಂಡ್
ಮೊರ್‌ಡೆತಿಲಾ, ನೆಗ್‌ಸೆತಿಲಾ ಇದ್ದ್‌ಂಡ್
ಜೀವನ ನಡೆಸ್‌ತ್ತ್ರೋಳ್ ನಮ್ಮಮ್ಮ

ಹೆಚ್. ವಿ. ಸುನಿತಾ ವಿಶ್ವನಾಥ್,
ಬೆಟ್ಟಗೇರಿ.

# ಮಳೆಯೋ....ಹೆಂಗಳೆಯೋ...

ಮಳೆಯಲಿ ನೆನೆಯುತ
ಸಾಗುವ ಹುಡುಗಿಯ
ಕಂಡರೆ ಮನವದು ಕುಣಿಯುವುದು

ಬೀಳುವ ಮಳೆಯಲಿ
ನಡೆಯುವ ಆ ಪರಿ
ಕಂಡರೆ ತುಸುವೇ ನಾಚುವುದು

ಹನಿ ಹನಿ ಮಳೆಗೆ
ಪ್ರಕೃತಿ ಹೋಲಿಕೆಗೆ
ಆಕೆಯೇ ಎಂದು ಹೇಳುವುದು

ಎಂತಹ ವದನವೂ
ಸುಂದರವಾದ
ಅಂದವ ಈ ಮಳೆ ನೀಡುವುದು

ಹಾಗಾಗಿಯೇ ನಾ
ಕಾಯುವೆ ಪ್ರತಿದಿನ
ಹನಿ ಹನಿ ಮಳೆಯು ಬರುವುದನೇ
ಅಂದೇ ಕಾಣುವೆ
ಪ್ರತಿ ಹುಡುಗಿಯಲೂ

ಪ್ರಕೃತಿ ದೇವಿಯ ಸೊಬಗನ್ನೇ

ರಮ್ಯ.ಜಿ.
ಕೆ.ಆರ್.ನಗರ,
ಮೈಸೂರು.

# ನಿರ್ಲಕ್ಷ್ಯ

ಪೊದೆಯೊಳಗೆ ನಾನೇ, ಕಸದ ತೊಟ್ಟಿಯಲ್ಲೂ ನಾನೇ
ಕಣ್ಣು ಬಿಟ್ಟು ಪ್ರಪಂಚ ಕಾಣದ
ಮಾಂಸದ ಮುದ್ದೆಯು ನಾನೇ
ನನ್ನಮ್ಮಗೆ ಬೇಡವಾದ ಅನೈತಿಕ ಹೆಣ್ಣುಕೂಸು ನಾನೇ
ಕನಸುಗಳಿವೆ ನನ್ನಲ್ಲಿ
ಮುದುಡಿ ಮಲಗಿದೆ ನಿನ್ನೊಡಲಲ್ಲಿ
ನಿನ್ನೊಂದಿಗೆ ಹಂಚಿದ ರಕ್ತ ನನ್ನಲ್ಲಿ
ಸಮಾಜಕ್ಕೂ ಬೇಡವಾದ ಕೂಸುನಾನಲ್ವೆ

ನಿನ್ನ ಹೆತ್ತದ್ದು ಹೆಣ್ಣೆ, ನನ್ನಪ್ಪನ ಹೆತ್ತದ್ದು ಹೆಣ್ಣೆ
ನೀನು ನನ್ನಂತೆ ಹೆಣ್ಣೆ
ನಿಮ್ಮ ಕಣ್ಣಗಳಿಗೆ ಶತ್ರುವಾದದ್ದು ಈ ಹೆಣ್ಣು
ಹಣ್ಣು ಸುಲಿದಷ್ಟು ಸುಲಭವೇ ಈ ಹೆಣ್ಣು
ಕಣ್ತೆರೆದು ಲೋಕನೋಡದೆ
ಹಸಿ ದೇಹ ತಣ್ಣನೆ ರಕ್ತ
ಮುಂದಿನ ಭಾವಿ ಯುವತಿ ನಾನಲ್ವೆ
ನಾನು ನಿನ್ನ ನೀಚ ಸಂಬಂಧದ
ಹೆಣ್ಣು ಕೂಸೆ
ನನ್ನದೊಬ್ಬಳದ್ದೆ ಈ ಕೂಗು
ನನ್ನಂತೆ ಕಣ್ತೆರೆಯದ ಇನ್ನೆಷ್ಟು ಹಸುಳೆಗಳ
ಆಕ್ರಂದನ ಆಲಿಸುವವರಾರು?
ಎಲ್ಲೆಲ್ಲೂ ಹೆಣ್ಣೆ ನಿಮ್ಮ ಹೆತ್ತಾಕೆಯೂ ಹೆಣ್ಣೆ
ಅಮ್ಮಾ ! ಏಕೀ ನಿರ್ಲ್ಯಕ್ಷ್ಯ.

ದಿವ್ಯ.ಎಂ.ಎಂ., ಮಡಿಕೇರಿ.

# ನನ್ನಯ ಪ್ರಶ್ನೆ

ಅಜ್ಞಾನವೆಂಬ ಕತ್ತಲಡಿಯಲ್ಲಿ
ದೂಡಿದ ಈ ಬಾಳನ್ನು
ನಿತ್ಯವಸಂತದ ಬೆಳಕಿನೆಡೆಗೆ
ಎಳೆದೊಯ್ಯುವವರು ಯಾರು ?||

ಮನಸ್ಸೆಂಬ ಅಕ್ಷಿಪಟಲದಲ್ಲಿ
ಚಿಂತೆಯೆಂಬ ಲೇಖನಿರಿಸಿ
ಬರೆದ ಬರವಣಿಗೆಯ ಈ ಬಾಳ
ಜೋಡಿಗಾಡಿ ಎಳೆಯುವವರು ಯಾರು?||

ವಾತ್ಸಲ್ಯ -ಪ್ರೀತಿ- ಮೋಹದ
ಸೆಳೆತವೆ ಈ ಬಂಧನ
ವಿಮುಕ್ತಿ ಎಂದಿಗೆ ಈ ಬಾಳಿಗೆ
ಮಣ್ಣಡಿ ಸೇರಿದಾಗ ಅಧ್ಯಾಯ
ತೆರೆಬೀಳುವುದು ಈ ಜೀವನದ
ಕೊನೆಯ ವಸಂತದಾಚೆಗೆ
ನಿಲುಕದ ಒಬ್ಬನ ಸೂತ್ರದಾರನ ನಾಟಕದಲ್ಲಿ ||

ಸತ್ಯಪ್ರಸಾದ್ ಎ.ಜಿ.
ಸೋಮವಾರಪೇಟೆ

# MARRIAGE

Marriage is inevitable for every person,
and where a person marries trouble begins.
Husband and wife quarrel sometimes,
For the sake of goodness always.
calamities and calastroplies are common in life.
and it should be bravely faced in life .
children should be well-fed by them,
and heavy responsibility is there for them.
Divorce is a common disease nowadays,
and murdering is also common nowadays.
We seem to be following the western culture,
which is not suitable for our culture.
One should marry with love and affection,
and not marry with high passion.
parents and elders should like the pair,
and it should not be left as unfair.
Our dress and culture are world famous,
and it should not be left as unfamous.
We should be the Deioties of God always,
and earn name and fame in this world.
And earn name and fame also in the upper world
I Conclude my Somwarpet Kavighoshti Poem herewith
The international kavighoshti herewith.
" Jai Hind "

**A.M. Belliappa,** M.A., M.D.A., B.Ed,
Cherambane.

# "ಮೌನದೊಡಲಿನ ಮಾತುಗಳು"

ಬರೆಯಬೇಕೆನಿಸುತ್ತಿದೆ...
ಏನು ? ಬರೆಯಲಿ .....ನಾ
ಪ್ರಜಾಪ್ರಭುತ್ವದ ಹುನ್ನಾರಿನಲ್ಲಿ.....
ಅಧಿಕಾರದ ಲಾಲಸೆಯಿಂದ...
ಹಣ, ಹೆಂಡವ ಹಂಚಿ....
ಪೊಳ್ಳು ಆಶ್ವಾಸನೆ ಹರಡಿ.....
ಕರಡಿಯಂತೆ ಬದುಕು
ಇವರ ಗೋಸುಂಬೆ ತನದ ಬಗ್ಗೆ... ಬರೆಯಲೇ ?
ಬರೆಯಬೇಕೆನಿಸುತ್ತದೆ...
ಏನು ? ಬರೆಯಲಿ ನಾ..
ಸರ್ಕಾರಿ ಸೌಲಭ್ಯಕ್ಕಾಗಿ..
ತಬರನ ಕಥೆಯೆಂತೆ...
ಮತ್ತೆ...ಮತ್ತೆ ಎಡತಾಗುವ
ಬಡ ರೈತನನ್ನು ಅಕ್ಟೋಪಸ್‌ನಂತೆ
ಹಣಕ್ಕಾಗಿ ಹಿಂಸಿಸುವ...
ಕೆಲ ಸರ್ಕಾರಿ ಅಧಿಕಾರಿಗಳ ಬಗ್ಗೆ ಬರೆಯಲೇ ?
ಬರೆಯಬೇಕೆನಿಸುತ್ತಿದೆ....
ಏನು ? ಬರೆಯಲಿ ನಾ
ದೇಶದ್ರೋಹಿಗಳ ಬಾಂಬು ಸ್ಫೋಟಕ್ಕೆ
ಬಲಿಯಾದ ಅಮಾಯಕ ಜನಗಳು...
ಭಯೋತ್ಪಾದಕರ ದಾಳಿಗೆ
ಸಿಲುಕಿ ಸತ್ತ... ವೀರ ಸೈನಿಕರ ಬಗ್ಗೆ
ಬರೆಯಲೇ ... ಏನು ? ಬರೆಯಲಿ ನಾ

ನ.ಲ.ವಿಜಯ, ಸೋಮವಾರಪೇಟೆ.

# ಬಣ್ಣದ ಚಿಟ್ಟೆ

ಓ ನನ್ನ ಬಣ್ಣದ ಚಿಟ್ಟೆ
ನಿನ್ನ ನೋಡಲು ನಾ ಓಡಿ ಬಂದು ಬಿಟ್ಟೆ|
ನಿನ್ನ ಮೈ ಮೇಲಿರುವ ಆ ಚುಕ್ಕಿ ಪಟ್ಟೆ!
ನೋಡ ನೋಡುತ ನಾ ಬಲು ಖುಷಿ ಪಟ್ಟೆ !

ಎಲೆಯ ಮೇಲಿತ್ತು ನೀನಿಟ್ಟ ಮೊಟ್ಟೆ
ಮರಿ ಆಗುವುದೆಂದು ? ನೀ ಹೇಳು ಚಿಟ್ಟೆ|
ನನ್ನ ಕೈ ಮೇಲೊಮ್ಮೆ ನೀ ಕೂರು ಚಿಟ್ಟೆ !
ಕೇಳದೇ ನನ್ನ ದನಿ? ಹಾರಿಯೇ ಬಿಟ್ಟೆ!

ನಿನ್ನ ಅಂದವ ಕಂಡು ನಾ ಆಸೆಪಟ್ಟೆ
ಅದಕ್ಕಾಗಿ ನೀನಂತು ಬಲು ಜಂಬ ಪಟ್ಟೆ |
ಯಾರು ಕೊಟ್ಟರು ನಿನಗೆ ಆ ಬಣ್ಣ ಬಣ್ಣ
ನನಗೂ ಒಂದಿಷ್ಟು ಕೊಟ್ಟರೆಷ್ಟು ಚೆನ್ನ !

ಮೋನಿಷ್.ವಿ.ಜೆ.
ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆ,
ಮಡಿಕೇರಿ.

# ಸುಂದರಿಯರು

ಅಮ್ಮಳಿಗೆ
ತಾನು ಜನ್ಮವಿತ್ತ ಹೆಣ್ಣುಮಗು ಸುಂದರಿ
ಗಂಡನಿಗೆ ಸಹೃದಯದ ಹೆಂಡತಿ ಸುಂದರಿ
ಸಾಹುಕಾರನಿಗೆ
ತನಗಾಗಿ ಬೆವರು ಸುರಿಯುವಾಕೆ ಸುಂದರಿ

ಹಸಿದ ಮಕ್ಕಳಿಗೆ
ದುಡಿದು ತರುವ ತಾಯಿ ಸುಂದರಿ,
ಮುದುಕನಿಗೆ ಹಾರೈಕೆ ಮಾಡುವ
ಮಗಳು ಸುಂದರಿ

ಸಹೃದಯಿ ಕವಿಗೆ
ಜಗತೇ ಸುಂದರಿ
ಮತ್ತೆ ಮತ್ತೆ ಯಾಕೆ
ಈ ವಿಶ್ವ ಸುಂದರಿಯರು
ಲೋಕ ತ್ರಿಲೋಕ ಸುಂದರಿಯರು

ಇ. ಸುಲೇಮಾನ್
ಸುಂಟಿಕೊಪ್ಪ

# ಬಣ್ಣದ ಚಿಟ್ಟೆ

ಓ ನನ್ನ ಬಣ್ಣದ ಚಿಟ್ಟೆ
ನಿನ್ನ ನೋಡಲು ನಾ ಓಡಿ ಬಂದು ಬಿಟ್ಟೆ|
ನಿನ್ನ ಮೈ ಮೇಲಿರುವ ಆ ಚುಕ್ಕಿ ಪಟ್ಟೆ!
ನೋಡ ನೋಡುತ ನಾ ಬಲು ಖುಷಿ ಪಟ್ಟೆ !

ಎಲೆಯ ಮೇಲಿತ್ತು ನೀನಿಟ್ಟ ಮೊಟ್ಟೆ
ಮರಿ ಆಗುವುದೆಂದು ? ನೀ ಹೇಳು ಚಿಟ್ಟೆ|
ನನ್ನ ಕೈ ಮೇಲೊಮ್ಮೆ ನೀ ಕೂರು ಚಿಟ್ಟೆ !
ಕೇಳದೇ ನನ್ನ ದನಿ? ಹಾರಿಯೇ ಬಿಟ್ಟೆ!

ನಿನ್ನ ಅಂದವ ಕಂಡು ನಾ ಆಸೆಪಟ್ಟೆ
ಅದಕ್ಕಾಗಿ ನೀನಂತು ಬಲು ಜಂಬ ಪಟ್ಟೆ |
ಯಾರು ಕೊಟ್ಟರು ನಿನಗೆ ಆ ಬಣ್ಣ ಬಣ್ಣ
ನನಗೂ ಒಂದಿಷ್ಟು ಕೊಟ್ಟರೆಷ್ಟು ಚೆನ್ನ !

**ಮೋನಿಷ್.ವಿ.ಜೆ.**
ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆ,
ಮಡಿಕೇರಿ.

# ಸುಂದರಿಯರು

ಅಮ್ಮಳಿಗೆ
ತಾನು ಜನ್ಮವಿತ್ತ ಹೆಣ್ಣುಮಗು ಸುಂದರಿ
ಗಂಡನಿಗೆ ಸಹೃದಯದ ಹೆಂಡತಿ ಸುಂದರಿ
ಸಾಹುಕಾರನಿಗೆ
ತನಗಾಗಿ ಬೆವರು ಸುರಿಯುವಾಕೆ ಸುಂದರಿ

ಹಸಿದ ಮಕ್ಕಳಿಗೆ
ದುಡಿದು ತರುವ ತಾಯಿ ಸುಂದರಿ,
ಮುದುಕನಿಗೆ ಹಾರೈಕೆ ಮಾಡುವ
ಮಗಳು ಸುಂದರಿ

ಸಹೃದಯಿ ಕವಿಗೆ
ಜಗತೇ ಸುಂದರಿ
ಮತ್ತೆ ಮತ್ತೆ ಯಾಕೆ
ಈ ವಿಶ್ವ ಸುಂದರಿಯರು
ಲೋಕ ತ್ರಿಲೋಕ ಸುಂದರಿಯರು

ಇ. ಸುಲೇಮಾನ್
ಸುಂಟಿಕೊಪ್ಪ

# ಶಾಶ್ವತ

ಹುಟ್ಟುವುದು ತಿಳಿಯುದಿಲ್ಲ
ಸಾಯುವುದು ತಿಳಿಯುದಿಲ್ಲ
ಮನುಜ ಹುಟ್ಟುತ್ತಾನೆ !
ಜೀವನ ಹರಿಯುವ ನೀರಿನಂತೆ
ಬದುಕು ಬೀಸುವ ಗಾಳಿಯಂತೆ
ಮನುಜ ಜೀವಿಸುತ್ತಾನೆ |
ಯುಗಗಳು ಉರುಳುತ್ತದೆ
ಸಮಯ ಕಳೆಯತ್ತದೆ
ಮನುಜ ಬಾಳುತ್ತಾನೆ !
ಹರೆಯ ಹೋಗುತ್ತದೆ
ಮುಪ್ಪು ಬರುತ್ತದೆ
ಮನುಜ ಬದುಕುತ್ತಾನೆ
ವಯಸ್ಸು ಜಾಸ್ತಿ ಆದರೂ
ಶಕ್ತಿ ಇಲ್ಲವಾದರೂ
ಮನುಜ ಇರುತ್ತಾನೆ !
ಗೊತ್ತಾಗದೆ ಹುಟ್ಟಿದ್ದ
ತಿಳಿಯದೆ ಬೆಳೆದಿದ್ದ
ಅರಿವಾಗದೆ ಸತ್ತಿದ್ದ !
ಮನುಜ ಹೇಳಿ ಹುಟ್ಟುದಿಲ್ಲ
ಸಾವು ಕೇಳಿ ಬರುವುದಿಲ್ಲ !
ಸಮಯ ಹಿಂದಕ್ಕೆ ಹೋಗುವುದಿಲ್ಲ !
ಅದೇ ಗಾಳಿ
ಅದೇ ಬೆಳಕು
ಅದೇ ಸಮಯ ಶಾಶ್ವತ.

ಎಲಿಜಬೆತ್ ಲೋಬೋ, ಸೋಮವಾರಪೇಟೆ.

# ಬರಡು ಜೀವನ

ಕುಳಿತ್ತಿದ್ದ ಳಾಕೆ ಬರಡು ನೆಲದಲ್ಲಿ
ನೆನಪುಗಳು ಬತ್ತಿ ಹೋದ ನೀರಸ
ಜೀವನದಲಿ ನೊಂದು ಬೆಂದು
ಕನಸು ಕಂಗೊಳಿಸಿದ ರಾತ್ರಿಗಳೆಷ್ಟೊ
ಒಲವು ತುಂಬಿದ ಹಗಲುಗಳೆಷ್ಟೊ
ರಂಗು ರಂಗಾದ ಜೀವನದ ಹಸಿರು
ಚಿತ್ತಾರಗಳ ನಡುವೆ ಹಾರಿದ
ಪತಂಗದ ಭಾವನೆಗಳೆಷ್ಟೊ
ಅನುಮಾನದ ಚಿಗುರು ಬೆಳೆಯಲು
ಮನದಲಿ ಹೆಪ್ಪುಗಟ್ಟಿತು ಮೌನ ಈರ್ವರಲಿ.
ಕಡಿಮೆಯಾಯಿತು ಮಾತು, ಕಡಿದು ಹೋಯ್ತು ಬಂದ
ಒಡೆದು ಹೋಯ್ತು ಜೀವನವೆಂಬ ಮುತ್ತು
ಮಾನ ಹೋರಾಟವಾಯ್ತು ಬದುಕು
ಹಾಡು ಹಗಲಲೆ ದೃಷ್ಟಿ ಕಳೆದು ಕೊಂಡಿತು ಹೃದಯ
ಸಂಸಾರ ಶಿಥಿಲವಾಗಿ ಬಿಟ್ಟಿತು ಬಿರುಕು.
ಬಿರುಕು ಚುರುಕಾಗಿ ರಿಪೇರಿಯಾಗದ
ಭವ್ಯ ಸೌಧವಾಯಿತು ಬದುಕು.
ಜೋಡಿ ಹಕ್ಕಿಗಳಾಗಿ ಹಾಡಿ ನಲಿದ ಹೃದಯ
ಬತ್ತಿದ ಬರಡು ಕೊಳಗಳಾಯ್ತು
ನಲಿ ನಲಿಯುತ್ತಾ ಸಾಗಿದ ಬಾಳು
ಬರಡು ಕಂರವಾಗಿ ಹೋಯ್ತು
ಬಿರುಕು ಬಿಟ್ಟ, ಸಂಸಾರದಲ್ಲಿ
ಬಿಡಿಸಲಾರದ ಸಮಸ್ಯೆ ಅವನಿಗೆ
ಅವಳಲ್ಲಿ ಅವಳಿಗೆ ಅವನಲ್ಲಿ ಮೂಡಿದ
ಅನುಮಾನದ ಮೊಳಕೆ.

ಶ್ರೀಮತಿ ಮಳುವಂಡ ನಳಿನಿ ಬಿಂದು
ವಿರಾಜಪೇಟೆ.

# ನಂಬಿಕೆ

ಶಿವನುಂಡೊ ಇಲ್ಲೆಯೊ
ನಾಕದ್ ಬೋಂಡಿಚಿಲ್ಲೆ
ಶಿವನುಂಡ್ ಎಣ್ಣೊ ನಂಬಿಕೆಯೆ ಮದಿ
ನನ್ನ ಸೆರಿಯಾನ ಬಟ್ಟೆಲ್ ನಡ್‌ತುವಕ್

ತಪ್ಪ್ ಮಾಡತನ್ನನೆ ಎಚ್ಚರ ತಪ್ಪಕ್
ಮಾಡ್‌ನ ತಪ್ಪ್‌ನ ತಿದ್ದಿಯವಕ್
ಬೋರೆಯಿಂಡ ನಲ್ಲಾಮೆನ ಬಯೆಂದೊವಕ್.
ದೇವ ಉಂಡೊ ಇಲ್ಲೆಯೊ ಊರ್‌ರ ಅಂಬಿಲತ್
ವಾದ ಎನ್ನಂಗ್ ನಂಗ ನಂಗಡೊಳ್‌ಲ್
ಇಪ್ಪ ಪ್ರತಿಯೊಬ್ಬಂಡ ಮನಸ್ಸ್‌ಲ್

ಆತ್ಮಸಾಕ್ಷಿರ ಪೆದತ್ ಮನತ್‌ರ ಗುಡಿರೊಳ್‌ಲ್
ನಂಗಡ ಸರಿ ತಪ್ಪ್ ಒಪ್ಪ್‌ರ ವಿಶ್ಲೇಷಣೆಲ್
ದೇವಕ್ ಆಕಾರ ಉಂಡೋ ಇಲ್ಲೆಯೊ ನಂಗಕೆನ್ನಂಗ್
ಮಲೆ, ಕುಂದ್, ಕಾಡ್, ಪೊಳೆಯೇ ದೇವಾಂದ್
ಗೇನಮಾಡೋಕೆನ್ನ್

ಬೀಜುವ ತಂಗಾಳಿಯೆ ದೇವಾಂದೆಣ್ಣೊಕೆನ್ನ್
ಕುಡಿಪ ನೀರ್ ಕೂಡ ದೇವಳೆಂದ್ ಎನ್ನಂಗ್
ತೋಂದುಲೆ ಎಂಗಕ್. ಎಂಗಡ ಮನಸ್ಸ್‌ಕ್

ಗಿಡ, ಮರ, ಬಳ್ಳಿಯೆ, ದೇವತೆಯಾಪಕಾಗ ಎನ್ನಂಗ್
ದೇವಡ ಸ್ಥಾನ ಬೋಂಡವ ಮಳೆ ತೊರಿವ ಬಾನಕ್
ಕೂಳ್ ನೀರ್ ತಂದ್ ಚೋತ ತಡಿಕ್ ವಿಶ್ರಾಂತಿ
ತಪ್ಪಂತ ತಂಪಾನ ಜಾಗ ತಂದ
ಭೂತಾಯಿರ ಮಹತ್ವವಾನ ಘನಪಟ್ಟ
ಉಪಕಾರಕ್ಕ್

ಬೋಂಡುವೆ ಬೋಂಡು ದೇವಡ ಸ್ಥಾನ
ಪ್ರತ್ಯುಪಕಾರ ಮಾಡುವ ಮಾನವಂಡ ಮೀದ
ನಿತ್ಯಾ ಶಿವಗ್ಯಾನ ಮಾಡಿ ತುದ್'ಚಿ ಪಾಡಿ
ಬೆಚ್ಚ ನೀ ಶಿವಂಡ ಮೀದ ನೆಂಬಿಕೆ
ನೀಡ ಬಾಳಾಕು ನಂದಾಯಿ ಪೊಲಂದ ಕೆಂದಾವರೆ.

ಮಳುವಂಡ ನಳಿನಿ ಬಿಂದು
ವೀರಾಜಪೇಟೆ.

# ನಾನೇ ಹುಡುಕಿದೆ ನನ್ನ

ನಾನೇ ಹುಡುಕಿದೆ ನನ್ನ
ನನ್ನ ಮನದೊಳಗೆ
ಕಾರಣ ನನಗಿಂದು ಕಾಣುತ್ತಿಲ್ಲ
ಅಂದಿನ ಮುಗ್ಧತೆಯ ನಾನು...|
ಅಂದಿನ ನಾನು ಇಂದಿಲ್ಲ
ಇಂದಿನ ನಾನು ನನಗೆ ಬೇಕಾಗಿಲ್ಲ !

ಅಂದಿನ ನಾನು
ದುಂಡುಗಲ್ಲದ ಪೋರ,
ಆವಾಗ ಅಮ್ಮನ ಸೆರಗೇ ನನಗೆ ಆಧಾರ ...!
ಮುಗ್ಧತೆಯ ಸಾರುವ ಕಣ್ಣುಗಳು
ಎಲ್ಲರಿಗೂ ನಾನೇ ಬೇಕಂತೆ ಕೊಂಡಾಡಿ ಮುದ್ದಿಸಲು.....!

ಅವೆಲ್ಲ ಇಂದು ಮರೆಯಾದವೋ..
ಆದರಿಂದಲೇ ಅಂದಿನ ನಾನು ಇಂದಿನ ನಾನಲ್ಲ
ಯವ್ವನದ ಮದವೋ...?
ಬಿಸಿರಕ್ತದ ಹಬೆಯೋ....
ಎಲ್ಲವನ್ನೂ ಕಳೆದೆ

ದೊಡ್ಡತನ ಕಾಪಾಡುವಲ್ಲಿ
ಈ ನನ್ನ ಹುಂಬುತನವೇ
ನನ್ನ ದೂರ ತಳ್ಳಿದೆ....!
ಹಳೆಯ ನಾನೇ ನನಗಿಂದು ಬೇಕಾಗಿದೆ
ಅದಕ್ಕಾಗಿಯೇ ನಾನೇ ಹುಡುಕಿದೆ ನನ್ನ
ಅಂದಿನ ನನ್ನ

ಬರಮನೆ ಹೆಚ್. ನಾಗರಾಜ್.
ಕರಿಕೆ, ಚೆತ್ತುಕಾಯ

# ಅಂದ್ - ಇಂದ್

ಪಚ್ಚೆರಂಗ್‌ರ ಬನಕಾಡ್‌ಲ್
ಪಂಡ್ ಕಾಲತ್‌ಂಜ ಅಜ್ಜಪ್ಪಂಗ
ಬಾಳಿ ಬದ್‌ಕ್‌ಚಿ ಪ್ರೀತಿಲ್
        ಪೆರಿಯಂಗಳ ಕಂಡಕ ಭಕ್ತಿಲ್
        ಮಂಡೆಕೊಸ್ರ, ಕಳಕುಪ್ಪ್ಯತ್
        ಕೊಡವ ಪದ್ಧತಿಲ್
        ನೀತಿ ನಿಯಮತ್ ನಾಳ್ ಕಯಿಚತ್ ಪ್ರೀತಿಲ್
ಮುಂದ್ ಮನೆಲ್ ಒಗ್ಗಟ್ಟಲ್
ಪದ್ಧತಿ ಪರಂಪರೆ ನೆಮ್ಮದಿಲ್
ಮಣ್ಣ್ ಮನೆನ ತೇಚಿ ಮುಕ್ಕಿ
ಒಪ್ಪರತ್ ಕಯಿಪ ಇಂತ್ ನಮ್ಮನಾ
        ದೇವ ನೆಲೆನ ಬುಟ್ಟ್‌ಕೊಡ್‌ಕತೆ
        ಇಂಜ ಭೂಮಿನ ಆಳ್‌ಕೂಟತೆ
        ಪುಂಡ್ ಪೋಕರಿಯಕ್ ಇಂಬು ಕೊಡ್‌ಕತೆ
        ತಾಂಡ ಕೆಲಸತೇ ನೆಮ್ಮದಿಲ್ ನಾಳ್ ಕಯಿಚತ್
ಅಜ್ಜಪ್ಪಂಗಡ ಕಾಲ ಆಚಿ
ಮಕ್ಕ ಮರಿ ನೇಂದಿತಾಚಿ
ಕಾಫಿ, ಪುಳಿ ಬೇಲ್ ಬಾಣೆ
ಎಲ್ಲಿ ಕೊಡ್‌ತತ್ ಪರಕೀಯಕ್ ಗುತ್ತಿಗೆಕ್
        ಕಾಫಿರ ಕ್ರಯ ಪೊಂದ್‌ನನೆಕೆ
        ಮುಂದ್ ಮನೆನ ಮರಂದ್‌ಟ್ಟ್
        ದೇವ ನೆಲ ದಿಕ್ಕರಿಚಿಟ್ಟ್
        ಪೋಲಿ ಪೋಕರಿಯಡ ಸಂಗ ಮಾಡಿ
        ಕಾರ್- ಬಾರ್ ಪತ್ತ್‌ಚಿ ಮಕ್ಕಳೋ.
        ಕೂಲಿಕಾರ ಕ್‌ಟ್ಟತಿಪ್ಪಕ
        ಬಾರ್ ಕಳಿ ದೂರ ಬೆಚ್ಚಿ ತಾನ್ ಕೂಡೆ ನಯಿಚತ್

ಪೊಗ್ಗೇರ ಸುಮಿ ಸನ್ನು.

# ಕೊಡಗಿನ ಬೆಡಗು

ಕೊಡಗಿನ ಬೆಡಗಿನ ಸೊಬಗಿನ ಚೆಲುವನು
ಸವಿಯಲು ಬಾರೋ ಓ ಮನುಜ
ಅಂದದ ಚಂದದ ಸುಂದರ ನಾಡಿನ
ಸಿರಿ ಸಂಪತ್ತಿನ ಈ ಆಗರ.

ಕನ್ನಡ ನಾಡಿನ ಮುಕುಟಕೆ ಗರಿಯನು
ತಾ ನೀಡುಹುದೀ ನಾಡು
ಭಾರತ ದೇಶದ ಸೈನ್ಯದಿ ಶಕ್ತಿಯ ಮೆರೆದಿಹ
ವೀರ ಸೇನಾನಿಗಳೀ ಬೀಡು.

ಪಶ್ಚಿಮ ಘಟ್ಟದ ದಟ್ಟಾರಣ್ಯದಿ
ನೆಲೆ ನಿಂತಿಹುದೀ ನಾಡು,
ಅದರೊಳು ಹುದುಗಿಹ ವನಸಿರಿಸಂಪತ್ತಿನ
ಸಿರಿಗಂಧದ ಸಿರಿನಾಡು.

ಸಹಸ್ರ ಜನತೆಯ ದಾಹವ ನೀಗುವ
ತಾಯ್ ಕಾವೇರಿಯ ತಾಯ್ ನಾಡು
ವಿಧವಿಧ ಭಾಷೆಯ ಅಸಂಖ್ಯ ಜನತೆಗೆ
ಆಶ್ರಯ ನೀಡಿಹುದೀ ನಾಡು.

ಮಾನವ ನಿರ್ಮಿತ ಅಸ್ಪೃಶ್ಯತೆಗೆ ಆಸ್ಪದ
ನೀಡದ ಈ ನಾಡು
ಅದುವೇ ಸೊಬಗಿನ ಮಲೆನಾಡು,
ಕವಿಗಳು ಪೊಗಳಿದ ಈ ಕೊಡಗು

ಕಾಫಿಯ ಕಂಪಿಗೆ, ಕಾಳಿನ ಮೆಣಸಿಗೆ
ಮುದ ನೀಡಿಹುದು ಏಲಕ್ಕಿ.
ತೆಂಗಿನ, ಕೌಂಗಿನ , ಕಿತ್ತಲೆ ಹಣ್ಣಿನ
ತೋಟದಿ ಜೇನಿನ ಸವಿಗಾನ.

ಬತ್ತದ ಬಯಲಲಿ ಶುಂಠಿಯ ಸುಗ್ಗಿಗೆ
ತಲೆದೂಗಿಹುದೀ ನಾಡು.
ರಾಷ್ಟ್ರದ ಕ್ರೀಡಾ, ಶಿಕ್ಷಣ ಕ್ಷೇತ್ರದಿ
ಉನ್ನತ ಸ್ಥಾನವ ಪಡೆದಿಹುದೀ ನಾಡು.

ಪ್ರಪಂಚದೆಲ್ಲೆಡೆ ವಿವಿಧ ಕ್ಷೇತ್ರದಿ,
ಕೀರ್ತಿಯ ಪಡೆದಿಹುದೀ ನಾಡು
ಇದುವೇ ಕನ್ನಡ ಸಿರಿನಾಡು, ಕನ್ನಡಾಂಬೆಯ ಕರುನಾಡು
ತಾಯ್ ಕಾವೇರಿಯ ತಾಯ್‌ನಾಡು.

**ಕಾಯಪಂಡ ಬಿ. ಟಾಟಾ ಚಂಗಪ್ಪ**
ವೀರಾಜಪೇಟೆ

# ಆಸೆ

ಹಕ್ಕಿಯಾಗಿ ಗರಿಯ ಬಿಚ್ಚಿ
ಹಾರುವಾಸೆಯು
ಹಸಿರಿನಂದವನ್ನು ಸವಿದು
ಮೆಲ್ಲುವಾಸೆಯು

ಮೇಘವಾಗಿ ಬಾನಿನಲ್ಲಿ
ತೇಲುವಾಸೆಯು
ಹನಿಯಾಗಿ ಭುವಿಗೆ ಬಂದು
ಮುತ್ತಿಕ್ಕುವಾಸೆಯು.

ತೊರೆಯಾಗಿ ದೂರ ದೂರ
ಹರಿಯುವಾಸೆಯು
ಹರಿದು ಸಾಗರವ
ಸೇರಿಕೊಳ್ಳುವಾಸೆಯು.

ಸೂರ್ಯನಾಗಿ ಬಾನಿನಲ್ಲಿ
ಕೂಡುವಾಸೆಯು
ಕೂಡಿ ಜಗಕೆ ಬೆಳಕನ್ನು
ಬೀರುವಾಸೆಯು.

ಭಾವವಾಗಿ ಕವಿಯ ಮನವ
ಸೇರುವಾಸೆಯು
ಕವನವಾಗಿ ಹಾಳೆಯಲ್ಲಿ
ನಲಿಯುವಾಸೆಯು.

ಬಿ.ಬಿ. ಕಿಶೋರ್ ಕುಮಾರ್, ತಾವೂರು.

# ಆಸೆ

ಕಾಮುಕರ ಕಾಕ ದೃಷ್ಟಿಗೆ
ನಾಚಿ ನೀರಾಗಿ ತಲೆ ತಗ್ಗಿಸುವ
ಶಿಲಾಬಾಲಿಕೆಯರ
ಎದೆಮುಚ್ಚುವ
ಸೀರೆ ನಾನಾಗುವ ಆಸೆ.

ದಿಕ್ಕಿಲ್ಲದೆ ತುತ್ತು ಅನ್ನಕ್ಕೂ ಗತಿ ಇಲ್ಲದೆ
ಅಂಡಲೆಯುವ ಅನಾಥರಿಗೆ
ಮುಷ್ಟಿ ಅನ್ನ ನೀಡಿ
ಅವರ ಬಾಳಿಗೆ ಬೆಳಕಾಗುವ
ಅಮೃತಮಯಿ ತಾಯಿಯಾಗುವ ಆಸೆ.
ಮುಗ್ಧ ಹಸುಳೆ, ಅಬಲೆಯರ
ಮೇಲೆ ಅತ್ಯಾಚಾರವೆಸಗಿ
ಬೆಲೆವೆಣ್ಣುಗಳಾಗಿ ಮಾರುವ
ನೀಚ ಮಹಾಶಯರಿಗೆ
ಮೃತ್ಯು ಪಾಶವಾಗುವ ಆಸೆ.

ಇಲ್ಲಿಯ ಅನ್ನ, ನೀರು, ಗಾಳಿ ಸೇವಿಸಿ
ದೇಶಕೆ ದ್ರೋಹವೆಸಗುವ,
ಉಗ್ರಗಾಮಿಗಳಿಗೆ
ಸಹಾಯ ಹಸ್ತನೀಡಿ ಸಹಕರಿಸುವವರಿಗೆ
ಸುಡುವ ಜ್ವಾಲೆಯಾಗುವ ಆಸೆ.

ಪ್ರಜೆಗಳ ಮತಗಳಿಂದ ಗೆದ್ದು
ಸುಳ್ಳು ಆಶ್ವಾಸನೆಯ ಭರವಸೆ ಕೊಟ್ಟು
ದಾರಿ ತಪ್ಪಿಸುವ ಮಂತ್ರಿಗಳು.....
ಬಡವರ ಜೀವ ಹಿಂಡುವ ಭ್ರಷ್ಟ ಅಧಿಕಾರಿಗಳ
ಸದೆ ಬಡಿವ ಮಂತ್ರ ದಂಡವಾಗುವ ಆಸೆ.

ಅತಿವೃಷ್ಟಿ ಅನಾವೃಷ್ಟಿ
ಪ್ರಳಯ ಭೂಕಂಪ ತಪ್ಪಿಸಿ
ಇಡೀ ಬ್ರಹ್ಮಾಂಡ
ರಕ್ಷಿಸುವ
ಆದಿಶಕ್ತಿನಾನಾಗುವ ಆಸೆ.

ಶ್ರೀಮತಿ ಜಲಕಾಳಪ್ಪ
ಸೋಮವಾರಪೇಟೆ.

# ಸಮರಸವೇ ಜೀವನ

ಜನನವೆಂಬುದು ಜೀವನಕ್ಕೆ ದಾರಿ
ಜೀವನದ ಕೊನೆಯೇ ಮರಣಕ್ಕೆ ದಾರಿ
ಇವುಗಳ ನಡುವಿರುವುದೆ
ಸಂಗಾತಿಗಳ ಸುಂದರ ಮಿಲನ

ಎರಡು ನಿರ್ಮಲ ಹೃದಯಗಳ
ಪವಿತ್ರ ಬಂದನವೇ ಪ್ರೇಮ ಸಾಗರ
ಹಾಲು ಜೇನಿನಂತೆ ಈ ಜೀವನ
ಅದ ಸವಿದರೆ ಬದುಕೆ ಬಂಗಾರ

ಮಿನುಗುವ ತಾರೆಗಳಂತಿರಬೇಕು
ಬೆಳಕಿನ ಕಿರಣಗಳಂತಿರಬೇಕು
ಜೀವನ ಹೊಳೆಯುವ ಬಾಳ್ವೆಯಾಗಿರಬೇಕು
ಅದು ಸದಾ ಚಿರನೂತನವಾಗಿರಬೇಕು

ನಲಿಯುತ ಒಲಿಯುತ ಸಾಗಲು
ಸಂಗಮದ ಸಾರ ಸವಿಯಬೇಕು
ಬಾಳಿನ ಸವಿಗನಸು ನನಸಾಗಲು
ಬದುಕಿನ ದೀಪ ಬೆಳಗಬೇಕು

ಹೂವಿನಂತೆ ಬಾಳು ಅರಳಿಸಿ
ಸಮರಸದ ಜೀವನ ಬೆರೆಸಿ
ರಸವೆ ಜನನ ವಿರಸವೇ ಮರಣವೆಂದು
ಅರಿಯುವ ಜೀವನವೆ ಸಮರಸ

ಕು|| ಹೇಮಲತಾ ಪೊನ್ನಪ್ಪ,
ಬೆಟ್ಟಗೇರಿ .

# ಅಮ್ಮ....

ಅಮ್ಮ, ನೀ ನನ್ನ ಬಾಳಿಗೆ
ಬೆಳಕ ತೋರೊ ದೀವಿಗೆ...
ಕರಗಿ ಹೋಗೋ ಕ್ಯಾಂಡಲ್‌ನಂತಲ್ಲ
ಎಣ್ಣೆ ಮುಗಿಯೊ ದೀಪದಂತಲ್ಲ
ಬೂದಿಯಾಗೊ ಕಟ್ಟಿಗೆಯಂತಲ್ಲ
ಮಿಂಚಿ ಮರೆಯಾಗೋ ನಕ್ಷತ್ರದಂತಲ್ಲ
ಕೆಲವೊಮ್ಮೆ ಕಾಣಿಸೋ ಮಿಂಚಿನಂತಲ್ಲ
ಅಮವಾಸ್ಯೆಗೆ ದೂರ ಹೋಗೋ ಚಂದ್ರನಂತಲ್ಲ
ಸಂಜೆಯಾದರೆ ಮುಳುಗೋ ಸೂರ್ಯನಂತಲ್ಲ
ಅದೇ... ಅವರ್ಣನೀಯ... ಅದೃಶ್ಯ... ಅನಶ್ವರ !!

ಅಮ್ಮ ನೀ ಕೊರಗುವುದ ನಾ ನೋಡಲಾರೆ
ಅಳಬಾರದಮ್ಮ ಅಳಬಾರದು... | ನಿನ್ನವರೆಲ್ಲ ದೂರವಾದರೇನಂತೆ
ನಾನಿರುವೆ ನನ್ನಾಣೆಗೂ ನಿನಗೆ ಜೊತೆಯಂತೆ
ನನ್ನೀ ಜೀವನವೆ ನಿನಗಾಗಿ, ನೀ ಮಾಡಬೇಡ ಚಿಂತೆ
ಯಾವುದನ್ನೂ, ಯಾರನ್ನೂ ನೆನೆಯುತಲಿ | ನೀ ಕೊರಗಬೇಡ ಮತ್ತೆಮತ್ತೆ

ಶ್ರೀಮಂತ ಮನೆಯಲ್ಲಿ ನಿನ್ನ ಬಾಳಿಸುವೆನೋ ಅರಿಯದು
ಆದರೆ ಶ್ರೀಮಂತ ಮನದಲ್ಲಿ ನಿನ್ನ ಬಾಳಿಸುವೆ
ಸದಾ ನೀ ಆನಂದದೆ ಇರುವಂತೆ ಕಾಯುವೆ
ಈ ಜಗದಿ ನಾ ಒಂಟಿಯಾಗಿ ಬಾಳುವೆ, ನಿನ್ನ ಸೇವೆಗೋಸ್ಕರ
ನಿನ್ನ ಕಣ್ಣೀರನ್ನೊರೆಸೊ ತಾಯಿ ನಾನಾಗುವೆ
ನಿನಗೆ ಆಸರೆ ನೀಡುವ ತಂದೆ ನಾನಗುವೆ ಧೈರ್ಯ, ನೀಡುವ ಬಂಧು ನಾನಾಗುವೆ
ನಿನ್ನ ಜೊತೆಯಲ್ಲೇ ನೋವು ನಲಿವ ಹಂಚುವ ಗೆಳತಿ ನಾನಾಗುವೆ...

ಲತಾ ಎಸ್.ಎಸ್, ಗೋಣಿಮರೂರು.

# ಜೀವನ

ಜೀವನ ಒಂದು ವಿಚಿತ್ರ
ಬಯಸುವಾಗ ಬಾರದು ಸುಖ
ಬಯಸದೇ ಬರುವುದು ದುಃಖ
ನೀ ಬಯಸಿದ ವಸ್ತು ಸಿಗದಿದ್ದಾಗ ವೇದನೆ,
ನೀ ಬಯಸದೇ ಬರುವ ವಸ್ತುವನ್ನು ಮಾಡಬೇಡ ಕಂಡನೆ,
ಮೊದಲು ನೀ ಯಾರೆಂದು ಅರಿತುಕೋ
ಅನಂತರ ಬೇರೆಯವರನ್ನು ತಿಳಿದುಕೋ
ಯಾವಾಗಲೂ ಇರಲಿ ದೃಢ ನಿರ್ಧಾರ
ಹರಿಯುವುದು ಭರವಸೆಗಳ ಮಹಾಪೂರ
ಕೇವಲವಾಗಿ ನೋಡದಿರು ಯಾರನ್ನು
ನಿನ್ನನ್ನೂ ಗೇಲಿ ಮಾಡುವವರು ಇರುವರು
ತಿಳಿ ಮೊದಲು ಅದನ್ನು.

ಒಮ್ಮೆ ಆದ ಅವಮಾನವನ್ನು ನೀ ಎದುರಿಸಲು
ನಿನಗಾಗುವುದೇ ಯಶಸ್ವಿನ ಮೆಟ್ಟಿಲು
ತಾಳೆ ನೋಡದಿರು ನೋವನ್ನು ಸಂತಸದೊಂದಿಗೆ
ಜೀವನದಲ್ಲಿ ಜುಗುಪ್ಸೆಯಾಗುವುದು ನಿರಾಸೆಯೊಂದಿಗೆ
ಬಾಹ್ಯ ಸೌಂದರ್ಯವನ್ನೊಡಬೇಡ
ಅಂತರಂಗದ ಅಂದವನ್ನು ಕಡೆಗಣಿಸ ಬೇಡ

ನೀ ನಿನ್ನ ಗೌರವಿಸುವವರನ್ನು ಪ್ರೀತಿಸು.
ನಿನ್ನನ್ನು ಅನುಕಂಪಿಸುವವರನ್ನು ನೆನಪಿಸು
ಕಳೆದು ಹೋದ ನೋವಿಗೆ ಮರುಗದಿರು
ಇರುವ ಸಂತಸವನ್ನು ಮರೆಯದಿರು

ಹೃದಯವನ್ನು ಒಬ್ಬ ವ್ಯಕ್ತಿಗೆ ನೀಡು
ಸ್ನೇಹವನ್ನು ಎಲ್ಲರಿಗೂ ಕೊಡು
ವಿಶ್ವದಲ್ಲಿ ಸಮಸ್ಯೆ ನಿನಗೆ ಮಾತ್ರವಲ್ಲ !
ಪರಿಹರಿಸುವುದು ಅಸಾಧ್ಯವಲ್ಲ !
ಆತ್ಮಹತ್ಯೆಯೊಂದೇ ಪರಿಹಾರವೂ ಅಲ್ಲ !

ನೀ ದುಃಖಿಸುವಾಗ ಕಾಣುವರು ಹಿತೈಷಿ
ಬಳಿಕ ತೆರಳುವರು ಸಂತೈಸಿ
ಯಾವ ಕೈಗಳು ನಿನ್ನನ್ನು ಭರವಸೆಯಿಂದ ಮೆಲೆತ್ತಿ
ಅದೇ ಎಂದಿಗೂ ನಿನ್ನ ಬಾಳಿನ ಸಂಗಾತಿ
ಮೊದಲು ಬದುಕುವುದನ್ನು ಕಲಿ
ಆಮೇಲೆ ಬಾಳಿನೊಂದಿಗೆ ನಲಿ
ಕೊನೆಗೊಂದು ಆಶಯ ನಿನ್ನೊಂದಿಗೆ
ಬಾಳಿನ ದುಃಖವನ್ನು ಕಳೆ, ಸಂತೋಷವನ್ನು ಕೂಡಿಸು
ಬಾಳಿನ ಲೆಕ್ಕವನ್ನು ಹೇಗಾದರೂ ಮಾಡು
ಎತ್ತರ ವಿರಲಿ ಧನಾತ್ಮಕದೊಂದಿಗೆ

# "ಪುಂಡಂಗಡಾ ಕೂಟಾಗಾ ಭಂಡಂಗಡಾಟಾಗ"

ಪುಂಡಂಗಡಾಕೂಟ್ಕ್ಕೆಂದೂ ಕೂಡತ್ತಿಕ್ಕೊಂಡೂ
ಭಂಡಂಗಡಾಟ್ಲೆಂದೂ ಕೋಣಿಯತ್ತಿಕ್ಕೊಂಡೂ ||

ಕಂಡ್ಯಂಗಡಾಸೊತ್ತ್ಕ್ಕಾಷೆಪಡತ್ತಿಕ್ಕೊಂಡೂ ಪುಂಡ್
ಪೋಕ್ರಿಯಡಾಟ್ಲೆಂದೂ ಕೋಣಿಯತ್ತಿಕ್ಕೊಂಡು |
ಪುಂಡಕ್ಕ್ಕಟ್ಟಿಯಂಡುವೊಕ್ಕೆಂಗಾನಿಗತ್ತೋಡಿಕ್ಕೊಂಡು
ತಂಡಚಾಕ್ರಿಲ್ಕಾಲ ಕೈಚಂಡಿಕ್ಕೊಂಡೂ |
ಅಂಡನ್ಕಿತ್ತ್ಂಗಾ ನ್ಯೆಚಿತ್ತಿಕ್ಕೊಂಡೂ ಕಂಡಕಂಡೆಂಗಡಾ
ಕೂಟ್ಕ್ಕೆಂದೂ ಕೂಡತ್ತಿಕ್ಕೊಂಡೂ |
ಪುಂಡಂಗಡಾ ಕೂಟ್ಕ್ಕೆಂದೂ ಕೂಡತ್ತಿಕ್ಕೊಂಡೂ
ಭಂಡಂಗಡಾಟ್ಲೆಂದೂ ಕೋಣಿಯತ್ತಿಕ್ಕೊಂಡೂ |

ತುಂಡುಡ್ತಿತ್ತಂದೆಂಗಳಾ ಚಾಕಿಪೊಲ್ತ್ನ್ಯೆನೆಂಗಮರ್ಕತ್ತಿ
ಕ್ಕೊಂಡೂ ಮಂಬಟ್ಟತ್ತಂಬ್ಲಿನೆಂಗೆ ಕ್ಕೊಲೂನೆನತಿಯೆಂಡಿಕ್ಕೊಂಡೂ |
ದಂಡ್ ನೆನಕತ್ತಿಕ್ಕೊಂಡೂ ಎಂಗೆಂದೂಪರಜನಕ್ ಕೇಡ್
ಕೆಟ್ಟದ್ ಕ್ಕೆಯ್ಯೆತ್ತಿಕ್ಕೊಂಡೂ |
ಪಂಡಿಯತಾಚಾರತ್ ನೆಂಗೆಂದೂ ಮರ್ಕತ್ತಿಕ್ಕೊಂಡೂ
ಸಂಸ್ಕೃತಿಪದ್ದತಿ ಉಡ್ಪ್ನಡ್ಪ್ನೆಂಗಾಪೋತಿಕ್ಕೊಂಡೂ |
ಮೂಡ್ಕ್ ಕಡಿಚಿಟ್ಟೆನ್ನಕ್ಕೆಂಗ ತಕ್ಕ್ಪರೆಯತ್ತಿಕ್ಕೊಂಡೂ |
ನೇರ್ನೆಲ್ಲಿ ಕೊತ್ತಿತ್ನಲ್ಲತಕ್ಕ್ ಬಾಕ್ ಪಂರ್ದಿತ್ತಿಕ್ಕೊಂಡೂ |
ಪುಂಡಂಗಡಾ ಕೂಟ್ಕೆಂದೂ ಕೂಡತ್ತಿಕ್ಕೊಂಡೂ ಭಂಡಂಗ
ಡಾಟ್ಲೆಂದೂ ಕೋಣಿಯೆತ್ತಿಕ್ಕೊಂಡೂ ||

ಪೋಡಿಭಯತ್ತೆಂದೂ ತುಳ್ಳಿಕಳಿಕತ್ತಿಕ್ಕೊಂಡೂ ಸತ್ಯ
ಧರ್ಮಕ್ಕೆಕ್ಕೊಲೂ ತಾಕಕೊಡ್ತಿತ್ತಿಕ್ಕೊಂಡೂ |
ನಾಡ್‌ನಗರತ್ ಊರ್‌ಕೇರಿಲೆಂಗಾನಾವುನ್‌ಟಿನ್ಯಾಪ
ರೆಯೊಂಡೂ ತೋನಿಯೆಬಾಲೆಂಗಾಕಳಿಕತ್ತಿಕ್ಕೊಂಡೂ |

ಕಂಡಕೇಟ್ಟೆಂಗಡೆಂಜಿಕ್ಕೆಂದೂ ಕಾತಳ್ಕತ್ತಿಕ್ಕೊಂಡೂ
ಕೀಂಜಂಗಳಾಯೆಂಡೆಂಗಾ ಪಜ್ಜಿನಕ್ಕಿಯಳಾಕತ್ತಿಕ್ಕೊಂಡೂ |
ಕಿಂಡಿಪಾಲೆರ್ಕಿತ್ತೆಂಗಾ ದಾಪಂತ್ಯ ಬಾಳ್‌ರಾದೋಣಿ
ಲ್‌ಸಾಗೊಂಡೂಮಿಞಕ್ಕೆಂಗೊಂದಾಯಿ
ಸಂಸಾರ ಸಾಗರಾದಾಟೊಂಡೂ |
ಪುಂಡಂಗಡಾ ಕೂಟ್‌ಕ್ಕೆಂದೂ ಕೂಡತ್ತಿಕ್ಕೊಂಡೂ
ಭಂಡಂಗಡಾಟ್‌ಲೆಂದೂ ಕೋಣೆಯತ್ತಿಕ್ಕೊಂಡು ||

ಕುಂಡ್‌ಕುಡ್‌ಪ್‌ಕ್ಕೆಂಗಾಬೂವತ್ತಿಕ್ಕೊಂಡೂ ಭಂಡಳಳ್ಕಿ
ತ್ತೆಂದೂಜಗಳ ಜಿದ್‌ಡ್ಕೆಡೆಯುಂಡಾಕತ್ತಿಕ್ಕೊಂಡೂ |
ಕಂಡೆಕೋರಂಗಳಾಕತ್ತಿಕ್ಕೊಂಡೂ ನಂಗಕೊಂಡೆಕೂ
ಟಿತ್‌ದಾನ ಧರ್ಮಕೆಜ್ಜಿತ್ತಿಕ್ಕೊಂಡೂ |
ಕೇಡ್‌ಕಿಚ್ಚಿಲೆಂಗೆಂದೂ ಪಾಡ್‌ಪಟ್ಟೆನಾಕೆಣಕತ್ತಿಕ್ಕೊಂಡೂ |
ಮಾಡ್‌ನಾಕೇಡ್‌ಕೆಟ್ಟಾನಾ ಬೂಡಿತ್ತಿಕ್ಕೊಂಡೂ |
ಬೋಡ್‌ನ್ಯೆಂಗಕುಳ್ಳಾನ ಕೊಡ್ತಿತ್ತೆಚಿತ್ತಿಕ್ಕೊಂಡೂ ಪಾಡ್
ಪಟ್ಟೆಂಗಳನಂಗ ತಾಂಗಿತ್ತಿಕ್ಕೊಂಡೂ |
ಪುಂಡಂಗಡಾ ಕೂಟ್‌ಕ್ಕೆಂದೂ ಕೂಡತ್ತಿಕ್ಕೊಂಡೂ ಭಂಡಂಗ
ಡಾಟ್‌ಲೆಂದೂ ಕೋಣೆಯತ್ತಿಕ್ಕೊಂಡೂ ||

ಕಂಡ ಕಂಡಲ್ಲಿ ದೇವಳೆಂಗಾ ತೊತ್ತಂಡಿಕ್ಕೊಂಡೂ
ಭಕ್ತಿಭಾವತೆಂಗಬಾಳ್ ಬದ್‌ಕ್ನೀಸಿತ್ತಿಕ್ಕೊಂಡೂ |
ಭಂಡಂಗಳಾಯಿತೆಂಗಾ ಕೇಡ್ರೋಕ್ಕಾಗಾಕಂಡಕೇಟಾಂಗೆ
ಲಾಷೆಪಡೋಕ್ಕಾಗಾ |
ಕೂಡ್ ಕುಟುಂಬತ್‌ನೆಂಗಾನಂಬಿತ್ತಿಕ್ಕೊಂಡೂ ಬೋಂಡತ್ತ
ಕೆಟ್ಟ್‌ಕೇತರೆಕ್ಕ್‌ಳಿಯತ್ತಿಕ್ಕೊಂಡೂ |

ಅಂಡೋಡೆಂಗಾ ನಡ್‌ಪಕ್ಕೆಂದೂ ಮರ್ಪಕ್ಕಾಗಾ ತೆರಿ
ಬುಟ್ಟಿತ್ತೆಂದೂ ಕಾಲಾಟಿತ್ತಾಡಿಕಳಿಪಕ್ಕಾಗಾ |
ಪುಂಡಂಗಡಾಕೂಟ್‌ಕ್ಕೆಂದೂ ಕೂಡತ್ತಿಕ್ಕೊಂಡೂ
ಭಂಡಂಗಡಾಟ್‌ಲೆಂದೂ ಕೋಣೆಯತ್ತಿತ್ತೊಂಡೂ |

**"ಸತ್ಯಂ, ಶಿವಂ, ಸುಂದರಂ !"**

ಬಡ್ಡೀರ ಮಣಿಚಂಗಪ್ಪ
ಚೇರಂಬಾಣೆ, ಕೊಳಗದಾಳ್.

# ಒಯಿಪತ್ ಮಲ್ಲಿಗೆ

ತಂಪಾನ ಬೈಟ್‌ಲ್ ಎದ್ದವ
ಶಶಿನ ಕಂಡ್ ತೆಳ್‌ಚವ
ರಸಿಕಂಗಡ ಮನಸ್ಸ್‌ನ
ಕೆಡ್‌ತ್‌ಚಿ ಅವ

ನೋಟತೆ ಉಂಬಕ್ ಬಳ್‌ಂಬ್‌ಚಿ ಅವ
ವಿಶ್ವತೇ ಚಾಯಿಕರ್ತಿಂದ್ ಪೆದ ಪೋಚಿ ಅವ
ಶ್ವೇತಾಲಂಕಾರ ಭೂಷಿತಳಾಚಿ ಅವ
ತಂಪ್‌ಲೂ ಕಂಪ್‌ನ ಬೀರ್‌ಚಿ ಅವ

ತೆಳ್‌ಚಂಡೇ ಆಡುವಕ್ ಸುರು ಮಾಡ್‌ಚಿ ಅವ
ತೋಟತ್ ಚಿತ್ತಾರ ಬುಡ್‌ತ್‌ಚಿ ಅವ
ಸೋಮಂಡ ರಾಗತ್ ಮಂಡೆ ತಾತ್‌ಚಿ ಅವ
ತೆರ್‌ಂಗ್‌ವ ಸಮಯತ್ ಮುದ್‌ಡ್‌ಚಿ ಮನಸ್ಸ್
ಕಣ್ಣೀರ್ ಇಟ್ಟಂಡ್ ಕೊರಗ್‌ಚಿ ಅವ

ಪಿ.ಜಿ. ಮಹಾಬಲೇಶ್ವರ ಶರ್ಮ,
ಮಡಿಕೇರಿ

# ಬೆಳಗು

ಮೂಡಣದಿ ರವಿ ಬೆಟ್ಟಗಳಂಚಿನಿಂದ
ಬರುತಿಹನು ಮುದುಡಿ ಮಲಗಿದ್ದ
ಹಕ್ಕಿಗಳ ರೆಕ್ಕೆ ಬಿಚ್ಚಿ ಹಾರಿ ಮೇಲೇರಿ
ಸಂತಸದಿಂದ ರೆಕ್ಕೆಗಳನ್ನು ಬಡಿ ಬಡಿದು
ಸ್ವಾಗತಿಸುತ್ತಿದೆ ಉದಯ ರವಿಯ
ಮುಸುಕಿದ್ದ ಮಂಜಿನ ತೆರೆ ಸರಿದು
ಸೂರ್ಯನ ಕಿರಣಗಳು ಎಲ್ಲೆಲ್ಲೂ
ಪಸರಿಸುತ್ತಿವೆ ಎಲ್ಲರ ಚಿತ್ತ
ಸೂರ್ಯನತ್ತ ಹೊಂಬಿಸಿಲಿಗೆ ಮಯ್ಯನ್ನೊಡ್ಡಲಿ
ಸುಳಿದಾಡುತ್ತಿದೆ ತಂಗಾಳಿ ಸೂಯ್ಯಿ...!
ಸುಯ್ಯಿ ಎಂದು ಸುಪ್ರಭಾತವ ಹಾಡುತ್ತಿದೆ
ಗಿಡ, ಮರ, ಎಲೆಗಳ ಮೇಲೆ ಮಂಜಿನ ಹನಿಗಳು,
ಹನಿ, ಹನಿಗಳ ಒಳಗೆ ಸೂರ್ಯನ
ಕೆಂಪು ರಶ್ಮಿಗಳು ಬಿಂಬಿಸುತ್ತಿವೆ
ಅಲೆ ಅಲೆಯ ನೀರಿನಲ್ಲಿ ತೇಲುತ್ತಿರುವ
ಸೂರ್ಯನ ಬಿಂಬ ಆಕಾಶ ಭೂಮಿಗೆ
ಆರತಿ ಎತ್ತುವಂತೆ ತೋರುತ್ತಿದೆ
ಪೈರು ಪಚ್ಚೆಗಳು, ಸುಳಿವ ತಂಗಾಳಿಗೆ
ತಲೆಬಾಗಿ ಮನಸ್ಕರಿಸುತ್ತಿವೆ ಸೂರ್ಯ ದೇವನಿಗೆ.

ಕಮಲ ಕರಿಯಪ್ಪ
ಕುಶಾಲನಗರ.

# ಮುಂಜಾನೆಯ ಬೆಳಕು

ಮುಂಜಾನೆಯ ಅರುಣ

ಬೀರಲು ತನ್ನ ಕಿರಣ
ತೆರೆಯಿತು ನಯನ
ಸಮಸ್ತ ಜಗವೇ
ವಿಶ್ರಾಂತಿ... ಬಯಸಿ
ತೆರಳುವುದು ವಾಸಿ
ಎಂದರುಹಿ
ನೆಮ್ಮದಿಯ ಬಯಸಿ
ಮರೆಯಾದನು ಶಶಿ
ರವಿಯ ಸೊಬಗಿನ ಕಿರಣಕೆ
ತಲೆದೂಗಿತು ಮನ
ಉಲ್ಲಾಸಗೊಂಡಿತು ತನು
ಉದಿಸಿತಾಗಲೇ ಈ ಕವನ
ಹಾಡಿತು ತನುವಿನ
ರಕ್ತದ ಕಣ ಕಣ
ಬೀಗಿತು ಮನ
ಹಿಗ್ಗಿನಿಂದ ಪುನಃ ಪುನಃ
ಹಾಡಿತು ಆಗಲೇ
ಚೆಲುವಿನ ಕೋಗಿಲೆ
ಕರೆಯಿತು ಅಲ್ಲಿಗೆ
ಎಲ್ಲರ ಮೆಲ್ಲಗೆ

ಬಿ.ಬಿ. ಕಿಶೋರ್ ಕುಮಾರ್
ತಾವೂರು

# ಅವ್ವನ ಕಾಲನೇ ಲಾಯಕ್

ಸೂರ್ಯ ಮುಳುಗಿತ್
ಹೊತ್ತ್ ಕಂತಿತ್
ನನ್ನವ್ವ ತೀರಿಹೋಗಿ ವರ್ಷ ಒಂದಾತ್
ನನ್ನವ್ವ ಸ್ವರ್ಗಕ್ಕೆ ಹೋತ್
ಅವ್ವನ ದೊಣ್ಣೆ ಮೂಲೇಲಿ ಕಾಂಬಕನ, ಅವ್ವನ ನೆಂಪಾದೆ
ಅವ್ವನ ಮುರ್‌ಕಲ್ ಮನೆನ ಮೂಲೆಲಿ ನೋಡ್‌ಕನ ಅವ್ವನ ನೆಂಪಾದೆ
ಸೂರ್ಯ ಮುಳುಗೀತ್
ಹೊತ್ತ್ ಕಂತಿತ್
ರಾತ್ರಿ ಮಲ್‌ಗ್‌ಕನ ಅವ್ವ ಹೇಳ್‌ತ್ತಿದ್ದ ಅಜ್ಜಿ ಕಥೆ ನೆನ್‌ಪಾಕನ ಅವ್ವನ ನೆಂಪಾದೆ
ಅಂದವ್ವ ಪೊಕ್ಕುಳ ರೊಟ್ಟಿ, ಊರುಕೋಳಿಗೈಪ್ ಮಾಡಿಕೊಡುತ್ತಿದ್ದೊ,
ಇಂದ್ ಇದ್ ಅಪರೂಪ ಆಗ್‌ತ್ತಿದ್ದ್ ಅದರ ನೆನ್‌ಪಾಕನ ಅವ್ವನ ನೆಂಪಾದೆ
ಅಂದ್ 'ನಾ' ಒಲಿ ಮಂದ್ರಿಲಿ ಅವ್ವನೊಟ್ಟಿಗೆ ಮಲಗ್‌ತ್ತಿದ್ ಈಗ ಹಾಸಿಗೆಲಿ,
ಮಲ್‌ಗ್‌ಕನ ಅವ್ವನ ನೆಂಪಾದೆ
ನನ್ನವ್ವ ಅಂದ್ ಶಾಲೆಗೆ ಬುಟ್ಟ್ ಬರುತ್ತಿತ್, ಇಂದ್ ನಾ ಗೂಡೆಗಳೊಟ್ಟಿಗೆ
ಕೈಕೈ ಹಿಡ್ಕಂಡ್ ಕಾಲೇಜ್‌ಗೆ ಹೋಕನ ಅವ್ವನ ನೆಂಪಾದೆ
ಸೂರ್ಯ ಮುಳುಗೀತ್
ಹೊತ್ತ್ ಕಂತಿತ್

ಅವ್ವ ಅಂದ್ ಗದ್ದೆಲಿ ಬೊಗ್ಗಿಕಂಡ್ ಸುಗ್ಗಿ ಹಾಡ್ ಹೇಳಿಕಂಡ್ ಮಳೆಗೆ
ಸೊಂಡ್ತ್ತಿದ್ದ
ಕೀಂಜೋಲ್ ಅಟ್ಟಲುಟ್ಟು, ಅದರ ನೋಡ್‌ಕನ ಅವ್ವನ ನೆಂಪಾದೆ
ಮನೆ ಹಿಂದೆ ಮೂಲೆಲಿ ದೆವ್ವದ ಅಣಿನ ಹಾಗೆ ಅವ್ವ ಮಳೆಗೆ ಸೊಂಡ್ತ್ತಿದ್ದ
ಗೊರ್ಬೆ ನೇತ್ ಹಾಕಂಡ್‌ಟ್ಟು, ಅದರ ನೋಡ್‌ಕನ ಅವ್ವನ ನೆಂಪಾದೆ
ಅಂದವ್ವ ಮಾಡಿಕೊಡುತ್ತಿದ್ದ ಎಪ್ಪ್‌ಗೆ ಬಿದ್ದ ಅರೆಗನ ಗೈಪ್ ಮಿದ್ದಕ್ಕಿ ಊಟ
ನೆನ್‌ಪಾಕನ ಅವ್ವನ ನೆಂಪಾದೆ,
ಈಗ ಜರ್ಸಿ ಧನಗಳ ಪ್ಯಾಕೇಟ್ ಹಾಲ್ ಕುಡೆಕನಾ, ಅವ್ವ ಕೊಡುತ್ತಿದ್ದ
ಊರು ದನಗಳ ನೊರೆ ಹಾಲ್ ನೆನಪಾಕನ ಅವ್ವನ ನೆಂಪಾದೆ

ಸೂರ್‍ಯ ಮುಳಿಗೀತ್
ಹೊತ್ತ್ ಕಂತಿತ್

ಅವ್ವ ಕಾಲಾ ಕೆಟ್ಟ್‌ಟ್ ಮೊಬೈಲ್ ಪೋನ್‌ಲಿ ಕೆಮಾರ ಬಂದುಟ್ಟು,
ಅವ್ವ ನಿನ್ನ ನೆಂಪಾದೆ
ಅವ್ವ ನಿನ್ನ ಕಾಲನೇ ಲಾಯಕ್, ನಿನ್ನ ಕಾಲನೇ ಮತ್ತೆ ಬರ್‍ಲಿ ಅವ್ವ
ಅವ್ವ ನಿನ್ನ ನೆಂಪಾದೆ

ಸೂರ್‍ಯ ಮುಳುಗಿತ್
ಹೊತ್ತ್ ಕಂತಿತ್

ತೇಜೇಶ್ವರ ಕುಂದಲ್ಪಾಡಿ
ಸುಳ್ಯ

# ಮಕ್ಕಕ್ ದಂಡ್ ತಕ್ಕ್

ಕೊಡಗ್‌ರ ಕೇಳಿನ ಲೋಕಕ್ ಸಾರುವ
ನಾಡ್‌ರ ಕುಂಞಿಯ ನಂದಾಡ್
ನಾಡ್‌ರ ಕಾಡ್‌ನ ಪೊಳೆ ತೋಡ್ ನೀರ್‌ನ
ದೇವಾಂದ್‌ನೆನ ತಂಡ್ ಕಾಪಾಡ್
ಮಂದ್‌ಮಾನಿ ಬೋಜ ಮುಂದ್ ಮನೆ ಬೋಜ
ಎಂದಿಕು ಮಾಜತೆ ಬೆಚ್ಚವಡ್
ಅಪ್ಪನ ಕೆಣಕತೆ ಅವ್ವನ ದಣತತೆ
ತಪ್ಪತೆ ಗುರುನಂವ ತೊತ್ತವಡ್
ಜಮ್ಮ ಭೂಮಿ ಜಾಗ ಮಾರಿ ಮೆರಂದಂಡ್
ಗುರು ಶಾಪಕ್ ಮೊಳಿ ಯಾಗತಿರ್
ಊರ್‌ನ ಚೆದ್‌ಚಿತ್ ಒಕ್ಕಳ ಮುಡ್‌ಚಿತ್
ಬಂಬ ನಾನಾಪಿಂದ್ ನೆನೆಯತಿರ್
ತಾಮನೆ ಕೊಡಗ್‌ನ ದೂರ ತೆರಕಿತ್
ಕೊಡವಡ ನಡಪುನ ಮರೆಯತಿರ್
ತಕ್ಕ್ ತಕ್ಕಾರತು ನೀತಿನಡಪುಲು
ಎಕ್ಕೊಲು ಕೊಡವನೆ ಆಯಿತಿರ್
ನೀರ್‌ಕ್ ಮೇಲ್ ಪಾಲ್‌ಂದ್ ಆನಕೊ
ಮೀನ್‌ಕ್ ನೀರೇ ಆಧಾರ
ಪುಟ್ಪ್‌ನ ಜಾತಿನ ಬುಟ್ಪ್‌ಮರಂದಕ
ಕೆಡತಿರ ನೀಡ ಗ್ರಹಚಾರ
ಪಾಲ್‌ರ ಕೂವತ್ ಮೀನದೊ ಬಾವುಲೆ
ಮೀನ್‌ಕ್ ತೋಡೆ ಆದಿನೆಲೆ
ಕೊಂಗಂಡ ಚಿಂಡದ್ ಕೊಡವಂಗ್ ಒಗ್ಗುಲೆ
ಜಾತಿನ ಬುಟ್ಟಿತ್ ಕೆಡತೆ ನೆಲೆ.

ಬಾಚರಣಿಯಂಡ ಅಪ್ಪಣ್ಣ. ಕುಶಾಲನಗರ

# ನೆಲದ ಬೇರು

ಬೆತ್ತಲೆ ಬೆಂಗಾಡುಗಳ
ಹೆಪ್ಪುಗಟ್ಟಿದ ಜೊಂಡು ಹಲ್ಲುಗಳ ನಡುವೆ
ವಿಷ ಜಂತು ಕಾಡುಮೃಗಗಳ
ಕೊರಕಲು ಹಿಮಗಿರಿ ತಟಗಳ ನಡುವೆ
ಕಳಚಿ ಬಿದ್ದ ಹಣ್ಣಿನೊಂದು ಬೀಜ
ಆಲದ ಗಿಡವಾಗಿ ಮರವಾಗಿ ಬೆಳೆದಿತ್ತು.

ಒಂದು ಸಂಜೆ
ಮರಗಳ್ಳರು ಬಂದರು
ರೆಂಬೆಕೊಂಬೆಗಳನ್ನೆಲ್ಲ ಕತ್ತರಿಸಿದರು
ತೊಗಟೆಗೆ ಮೊಳೆ ಹೊಡೆದರು
ಬೇರುಗಳನ್ನಗೆದರು
ಮರಬೋಳಾಗಿತ್ತು.

ಮರದುಃಖಿಸುತ್ತಿತ್ತು!
ಎಲೆಗಳಿಲ್ಲದೆ ಹೇಗೆ ಆಹಾರ ಸೇವಿಸಲಿ?
ರೆಂಬೆ ಕೊಂಬೆಗಳಿಲ್ಲದೆ
ಬಿಸಿಲು ಮಳೆಯನ್ನು ಹೇಗೆ ಸಹಿಸಿಕೊಳ್ಳಲಿ?
ತೊಗಟೆಯಿಲ್ಲದೆ ಹೇಗೆ
ಮಾನರಕ್ಷಣೆ ಮಾಡಿಕೊಳ್ಳಲಿ?

ಎ.ಹೆಚ್. ಸತೀಶ್‌ಕುಮಾರ್
ಶಿಕ್ಷಕರು, ಚೇರಂಬಾಣೆ

# ಉಯಿಲು

ಕಾರುಸರಿಯದ ಕಾಡನಡುದಾರಿಯಲ್ಲಿ
ಹೂತುಬಿಡಿ ನನ್ನ, ಜೊತೆಗೆ ಹೆಸರು - ಭಾವ ಚಿತ್ರಗಳನ್ನು
ಬಿರಬಿರನೆ ಸರಿವ ಅವರ ಬರಿಗಾಲ ಚುಂಬನಕೆ
ಒಳಗೊಳಗೆ ಬಿರಿದು ಪುಳಕಗೊಳ್ಳುವೆನು!
ಯಾರಿಗೆ ಹಂಚಲಿ ನನ್ನ ಎಲ್ಲೆಯಿರದ ಆಸ್ತಿಯನ್ನು?
ಇಕೋ ಬೆಳಕ ತಂತಿ-
ನನ್ನ ಸಹರಾ, ಗ್ರೀನ್ ಲ್ಯಾಂಡ್‌ಗಳನ್ನು ಬೇಲಿ ಹಾಕಿ ಬಳಸಿ
ಬೇಕಾದಷ್ಟು ತಾರಸಿ ಮನೆಯ ಕಟ್ಟಿಕೊಳ್ಳಿರಿ
ನನ್ನ ಮರಣದ ನಂತರ,
ಏಕವಾಗುವ, ಅಭೇದವಾಗುವ ನಮ್ಮಿಬ್ಬರ ಮದುವೆ ಛತ್ರದಲ್ಲಿ
ನಾಚುವ ಇವಳು ಸಂಜೆಯ ಸೂರ್ಯ.
ನನ್ನೊಲುಮೆಯ ಬ್ಯಾಕ್ಟೀರಿಯಾಗಳದು ಅಹೋರಾತ್ರಿಯ ನೃತ್ಯ!
ನಾನು ಸತ್ತಮೇಲೆ
ಅಳುವವರ ಕಣ್ಣೀರ ಹನಿಗಳನ್ನು ಸಂಗ್ರಹಿಸಿ
ಚಿಮುಕಿಸಿಬಿಡಿ ಮಣ್ಣ ತುಂಬ,
ಹೂವು ಬಿರಿಯಲಿ ಕಾಡಕಂಗಳಲಿ-ಲವಣಗಳ ಕುಡಿಕುಡಿದು!
ನಾಲಗೆಯ ಉಬ್ಬರವಿಳಿತದ ಸುತ್ತ ನಿರ್ವಾತ ಸೃಷ್ಟಿಸಿ
ನಾಲ್ವರ ಹೆಗಲಿಗೆ ಎಣ್ಣೆ ಸವರುವುದ ಮರೆಯದಿರಿ
ನನ್ನ ಮೇಲೊಂದು ಬೋನ್ಸಾಯ್‌ಗಿಡ ನೆಟ್ಟು
ಆಕಾಶಕ್ಕೇರುವುದನು, ಹಕ್ಕಿಹಿಕ್ಕೆ ಹಾಕುವುದನು ನೋಡಬೇಕು!
ಮರೆತುಬಿಡಿ ನನ್ನ;
ನಿತ್ಯದ ನಿಮ್ಮ ವಿಸರ್ಜನೆಯ ಹಾಗೆ!

**ಕಾಜೂರು ಸತೀಶ್, ಕರಿಕೆ**

# ಅನಾಥ ಕಂದನ ನೂರಾರ್ ಪ್ರಶ್ನೆ

ಯಾಕಮ್ಮಾ ಮಾಡ್ದ ಹಿಂಗೆ,
ಕರುಳ ಕುಡಿ ಮರ್‌ಡುವ ಸದ್ದ್ ಕೇಳದಂಗೆ
ಹೆಂಗಮ್ಮಾ ಬಾತ್ ಮನ್‌ಸ್ ನನ್ನ ಬಿಸಾಡಿಕೆ ಹಿಂಗೆ,
ಕಾಡ್‌ನ ತೊಟ್ಟಿಲಿ ವಳೆಲ್ಲಾ ಯಾರಿಗೂ ಬ್ಯಾಡದಂಗೆ

ಆಸೆ ಇಲ್ಲೆನಾ ನಿಂಗೆ ನನ್ನ ಕಂದ ನಂಗೆ ಬೇಕೂತ,
ನನ್ನ ಎತ್ತಿಕಂಡ್ ಮುದ್ದಾಡೊಕೂತ
ಎಲ್ಲವರಂಗೆ ನಾನೂ ಬೆಳ್ದ್ ದೊಡ್ಡವಳಾಕೂತ
ನಿನ್ನ ಮುಖಿನ ನನ್ನ ಮುಖಲಿ ಕಾಣೊಕೂತ.

ಯಾಕಮ್ಮಾ ಇಲ್ಲದಾತ್ ಆಸೆ ನಿಂಗೆ,
ಎಲ್ಲವರಂಗೆ ನಾನೂ ಅಮ್ಮಾತ ಕರಿಯುವಂಗೆ.
ಪುಟ್ಟ ಪುಟ್ಟ ಹೆಜ್ಜೆ ಇಟ್ಟ್ ನಡೆಯುವಂಗೆ,
ನನ್ನ ಮುದ್ದು ಮುದ್ದು ಮಾತ್‌ನ ಕೇಳುವಂಗೆ,
ಬಾಯಿ ಬುಟ್ಟ್ ಜೋರಾಗಿ ನೆಗಾಡುವಂಗೆ,
ನನ್ನ ಆಟನ ಖುಷೀಂದ ನೋಡುವಂಗೆ.

ಈ ಸಮಾಜಕೆ ಹೆದ್‌ರಿ, ಹೋದ ನನ್ನ ಬಿಸಾಕಿ
ಈ ನನ್ನ ಮುದ್ದು ಮುಖನ ನೋಡದೆ ತಿರ್‌ಗಿ.
ಯಾರ್ನ ಕರಿಯಲಿ ಇನ್ನ್ ನಾನ್ ಅಮ್ಮಾ ತೇಳಿ,
ಯಾರ್ ಕರ್‌ಕಂಡ್ ಹೋದವನೋ ನನ್ನ ಕಂದಾ ತೇಳಿ.

ಕಡ್ಲೇರ ಜಯಲಕ್ಷ್ಮಿ ಮೋಹನ್ ಕುಮಾರ್
ಬೆಟ್ಟಗೇರಿ

# ಪ್ರಾಸ....!!

ಹೀಗೇ...
ಪ್ರಾಸಗಳು ತಪ್ಪಿದಾಗಲೆಲ್ಲ
ಬದುಕು
ಕಥೆಯಾಗುತ್ತದೆ!

ಹಾಳೆ ಹರಿದಲ್ಲೆಲ್ಲ
ಕಥೆಗೊಂದು ರೋಚಕ ತಿರುವು..
ಅಕ್ಷರಗಳು ಕರಗಿ ಜಾರಿದಲ್ಲೆಲ್ಲ
ಒಂದೊಂದು ಸಸ್ಪೆನ್ಸ್!!

ದುಃಖ-ವೇದನೆ-ಹರ್ಷೋಲ್ಲಾಸಗಳ
ಲೇಖನ ಚಿಹ್ನೆಗಳಲ್ಲಿ ಬೆಂದು
ನೋಯುವ ನಮ್ಮೀ ಬಾಳಕತೆಗೂ
ಇದ್ದೆ ಇದೆಯೊಂದು ಪೂರ್ಣವಿರಾಮ!?

ಹರಿದ ಹಾಳೆಯ ರೋಚಕತೆ
ಹರಕು ಬಾಯಿಯಲಿ ಮೂರಾಬಟ್ಟೆ..
ಕರಗಿದಕ್ಷರದ ಸಸ್ಪೆನ್ಸ್
ದೊಡ್ಡದೊಂದು ಪ್ರಶ್ನೆಯಾಗಿ ಅರಳಿರುತ್ತದೆ!

ಹೀಗೇ... ಕೆಲವೊಮ್ಮೆ
ಪ್ರಾಸಗಳು ತಪ್ಪಿಬಿಡುತ್ತದೆ
ಕಾವ್ಯಗಳು ಕತೆಯಾಗಿ
ನಕ್ಕುಬಿಡುತ್ತದೆ!!

ಸುಮೇಶ್. ಎಂ.ಆರ್.
ಗೋಣಿಮರೂರು

# ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

| | | |
|---|---|---|
| ಅಧ್ಯಕ್ಷಿಣಿ | ಐಮುಡಿಯಂಡ ರಾಣಿ ಮಾಚಯ್ಯ | 08272-224139 (ಮ)<br>9449334415 (ಮೊ) |
| ರಿಜಿಸ್ಟ್ರಾರ್ | ವಿನೋದ್ ಚಂದ್ರ | 08272-228449 (ಕ)<br>9448267068 (ಮೊ) |
| ಸದಸ್ಯಂಗ | ಚೆಲ್ಲಜಮ್ಮನ ನಾಣಮ್ಮಯ್ಯ ಸೋಮೇಶ್ | 08272-228076 (ಮ)<br>9449475632 (ಮೊ) |
| | ಬಾಚರಣಿಯಂಡ ರಾಣು ಅಪ್ಪಣ್ಣ | 08276-274083 (ಮ)<br>9480730763 (ಮೊ) |
| | ಕೊರಕುಟ್ಟಿರ ಸರ ಚೆಂಗಪ್ಪ | 08274-225985 (ಮ)<br>9448587973 (ಮೊ) |
| | ಕಾಳಚಂಡ ಎ. ಪಳಂಗಪ್ಪ | 08272-233178 (ಮ)<br>9481469548 (ಮೊ) |
| | ಪೊನ್ನಿರ ಪ್ರಭು ಕಾವೇರಪ್ಪ | 08274-234255 (ಮ)<br>9980461299 (ಮೊ) |
| | ಮಂಡೇಪಂಡ ಗೀತಾ ಮಂದಣ್ಣ | 08274-252344 (ಮ)<br>08274 - 313513 |
| | ಕುಡಿಯಡ ಕೆ. ಕರುಂಬಯ್ಯ | 08272-238344 (ಮ)<br>9901309679 (ಮೊ) |
| | ವದಪಡ ಅಯ್ಯಪ್ಪ | 08274-342052 (ಮ) |

| | | |
|---|---|---|
| ಸದಸ್ಯಂಗ | ಮಡೆಯಂಡ ವಿಠಲ್ ಬೆಳ್ಯಪ್ಪ | 08272-232397(ಮ)<br>9901254371 (ಮೊ) |
| | ಪಡಿಞಾರಂಡ ಎ. ಪ್ರಭುಕುಮಾರ್ | 08274-272257 (ಮ)<br>9448720716 (ಮೊ) |
| | ತೇಲಪಂಡ ಕವನ್ ಕಾರ್ಯಪ್ಪ | 08276-282988 (ಮ)<br>08276-284067 (ಫ್ಯಾ)<br>9448325945 (ಮೊ) |
| | ಮಡೆಯಂಡ ಸಬಿತಾ ಕಾರ್ಯಪ್ಪ | 08272-232591(ಮ)<br>9480290465 (ಮೊ) |
| | ಬೀನಂಡ ಎಸ್. ಪೂಣಚ್ಚ | 08274-254095 (ಮ)<br>9448504227 (ಮೊ) |

# ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಅಕಾಡೆಮಿ ಬೊಳಿಪಡ್ತ್‌ನ ಕತೆ, ಕವನ,
ಕಾದಂಬರಿ, ಚರಿತ್ರೆ, ವಿಜ್ಞಾನ, ನಾಟಕ, ವೈಚಾರಿಕ
ಲೇಖನ.... ಇನ್ನತ ಕೊಡವ ಪುಸ್ತಕ ನಂಗಡಲ್ಲಿ
ಮಾರಾಟಕ್‌ಉಂಡ್.
ಬೋಂಡಿಯಾನವು ಅಕಾಡೆಮಿರ
ಕಾರ್ಯಾಲಯತ್ ವ್ಯವಹರಿಚಿಡಲು.

ವಿಳಾಸ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಸ್ಕೌಟ್ ಭವನ,
ಮ್ಯಾನ್ಸ್ ಕಾಂಪೌಂಡ್
ಮಡಿಕೇರಿ - 571 201
Ph : 08272 - 229074

Printed at : Sri Krishna Computers & Printers, Mdk. Ph : 224919, Mob : 94481 35592